Koravanji

ಕೊರವಂಜಿ



ಅಕ್ಟೋಬರ್ ೧೯೪೯

★

ಸಂಪಾದಕರು :

ಶ್ರೀ॥ ರಾ. ಶಿ.

ಬರಹಗಾರರು:

ಶ್ರೀ॥ ಇಕ್ರ್ಯ ಶಿಷ್ಯ
ಶ್ರೀ॥ ದಾಶರಥಿ ದೀಕ್ಷಿತ್
ಶ್ರೀ॥ ಮು. ದನ
ಶ್ರೀ॥ ಶಂಭು
ಶ್ರೀ॥ ಶಿವಣ್ಣ
ಶ್ರೀ॥ ಹಾ. ರಾ.
ಶ್ರೀ॥ ನಾಗರೀಕ ನಾಗೋಜಿ
ಶ್ರೀ॥ ಎಷ್ಟಿ
ಶ್ರೀ॥ ವೆಂಕಟ
ಶ್ರೀ॥. ಕುಮಾರ
ಶ್ರೀ॥ ಟಿ. ವಾ.

ಇತ್ಯಾದಿ, ಇತ್ಯಾದಿ.

ತಿಳಿನಗೆಯ ಮಾಸಪತ್ರಿಕೆ

"ರಸವೇ ಜನನ"
ವಿರಸ ಮರಣ
ಸಮರಸವೇ ಜೀವನ"

ಎಂದು ಹಾಡಿದ ಕವಿ

ಅಂಥಾ ಸಾಮರಸ್ಯ ಜೀವನದ ಆನಂದವನ್ನು ಸವಿಯಲು

A V.M ರವರ

ಜೀವನ

[LIFE] (ತಮಿಳು)

ಶೀಘ್ರದಲ್ಲಿಯೇ ಬರಲಿದೆ

ರಾಷ್ಟ್ರೀಯ ಜೀವನದಲ್ಲಿ ನವೋದಯವಾದಾಗ ಎಂಥಾ ಭವ್ಯ ಮಾರ್ಪಾಟು ತಲೆದೋರಿತು ಎಂಬುದನ್ನು ರಸಮಯವಾಗಿ ಮನಕಲಕುವಂತೆ ಚಿತ್ರಿಸಲಾಗಿದೆ

ಭೂಮಿಕೆಯಲ್ಲಿ :

ಕುಮಾರಿ ವೈಜಯಂತಿಮಾಲಾ	★	ದ್ರೌಪತಿ
ಟಿ. ಆರ್. ರಾಮಚಂದ್ರ	★	ಸಾರಂಗಪಾಣಿ
ಸಹಸ್ರನಾಮಂ	★	ಲಲಿತ-ಪದ್ಮಿನಿ

ಮತ್ತಿತರರು.

ದಿಗ್ದರ್ಶನ:
ಎ. ವಿ. ಮೇಯಪ್ಪನ್

ಸ್ಟುಡಿಯೋ :
ಎ. ವಿ. ಯಂ.

—o—

RELEASE THROUGH

TALLAM PICTURES CIRCUIT,

GANDHI NAGAR - - BANGALORE 2.


Silky Soft
and luxuriant
HAIR !
RAJA
(TRADE MARK)
HAIROIL
RAJA HAIR OIL
MANYAM & CO. Bangalore, Madras, Madura, Bombay.



ಸಂಪುಟ ೯ | ಅಕ್ಟೋಬರ್ ೧೯೪೯ | ಸಂಚಿಕೆ ೭

**

ಕುಹಕಿಡಿಗಳು

**

ರೂಪಾಯಿನ ಬೆಲೆ ಇಳಿದುಹೋಯ್ತು ಅಂತ ಎಂಟು ನೂರು ರೂಪಾಯಿ ಸಂಬಳ ಬರೋ ಖಾಸಗೀಯವರೆಲ್ಲಾ ಸಾವಿರ ಚಿಲ್ಲರೆ ಸಂಬಳ ಮಾಡಿಕೊಂಡು ಬಿಡುತ್ತಾರೋ?

* * *

ನಮ್ಮ ಸಚಿವ ಮಂಡಲದಲ್ಲಿ ಮಹಿಳೆಯರಿಗೆ ಏಕೆ ಸ್ಥಾನ ಸಿಗಲಿಲ್ಲ? ಎಂದೊಬ್ಬರು ಪ್ರಶ್ನಿಸಿದ್ದಾರೆ.

—ತಾತ್ಕಾಲಿಕ ಸ್ಥಾನಗಳಲ್ಲಿ ನಮ್ಮ ಮಹಿಳೆಯರಿಗೆ ಉತ್ಸಾಹವಿಲ್ಲ. ಅವರಿಗೆ ಆಜೀವ ಪರ್ಯಂತದ ಏರ್ಪಾಡುಗಳಲ್ಲೇ ಅಭಿರುಚಿ ಅಲ್ಲವೇ?

* * *

ಅಮೇರಿಕನ್ನರಿಗೆ "ಡಾಲರೇ" ದೇವರು ಎಂದು ಯಾರೋ ಹೇಳಿದರು.

—ದೇವರು ದೊಡ್ಡವನಾದ ಎಂದು ಈಗ ಅರ್ಥವಾಯಿತು.

* * *

ಪ್ರಧಾನಾಮಾತ್ಯರ ರೂಪಾಯಿ ಇಳಿತಾಯದ ಭಾಷಣ ಕೇಳುಕ್ಕೆ ಮೊದಲೇ ಬೊಂಬಾಯಿನ ವರ್ತಕರು ಇದ್ದ ಅಮೇರಿಕಾ ಸಾಮಾನುಗಳಿಗೆಲ್ಲಾ ಶೇಕಡ ನೂರರಷ್ಟು ಬೆಲೆ ಏರಿಸಿದ್ದರಂತೆ.

—ಅಂದರೆ ಭಾಷಣ ಕೇಳಿದ ಮೇಲೆ ಬೆಲೆ ಏರಿಸಲಿಲ್ಲ ಎಂದು ಹೇಳಿ ಕೊಳ್ಳಲೋಸುಗವೋ?

ಶ್ರೀ ಪಕ್ವಾಸಾ ಅವರು ಕಾಡು ಹುಡುಗಿಯು ಜತೆಗೆ ಕುಣಿದಾಡಿದರಂತೆ.

—ಪಕ್ವವಾದ ಇಸಮು!

* * *

ಬೆಂಗಳೂರಿನಲ್ಲಿ ಚಿಲ್ಲರೆ ಕಳ್ಳರೆಲ್ಲಾ ಮಾಯವಾಗಿ ಬಿಟ್ಟಿದ್ದಾರೆ. ಎಂದು ಪೋಲೀಸ್ ಅಧಿಕಾರಿಗಳೊಬ್ಬರು ಹೇಳಿದರಂತೆ.

—ಹೊಸದೇನು ಇದು? ಮೊದಲಿನಿಂದಲೂ ಹಾಗೆ, ಕಳ್ಳತನ ಮಾಡಿದ ಕೂಡಲೆ ಅವರು ಮಾಯ!

* * *

ದಸರಾ ಉತ್ಸವದಲ್ಲಿ ಶ್ರೀಯುತ ವಿ. ಪಿ. ಮೆನನ್ ಅವರು ಭಾಗವಹಿಸು ತ್ತಾರೆಂಬುದು ಇನ್ನೂ ಖಚಿತವಾಗಿ ಗೊತ್ತಾಗಿಲ್ಲವಂತೆ.

* * *

ಈ ಸಾರಿ ಸರಸ್ವತೀ ಪೂಜೆ ಮಾಡುವಾಗ ಕೋಮುವಾರು ಶೇಕಡಾ ರೀತ್ಯಾ ಗ್ರಂಥಕರ್ತರು ಬರೆದ ಪುಸ್ತಕಗಳನ್ನೇ ಪೂಜೆಗೆ ಇರಿಸಿ ಎಂದು ಸಲಹೆ ಬಂದಿಲ್ಲವಂತೆ.

* * *

"ಊರಿಗೆ ಬಂದವಳು, ನೀರಿಗೆ ಬಾರಳೇ" ಎಂಬ ಗಾದೆ ಪಾಕಿಸ್ತಾನಿಗಳ ವಿಷಯದಲ್ಲಿ ಪೂರ್ಣ ಸತ್ಯವಂತೆ.

* * *

ಪಾಕಿಸ್ಥಾನದವರು ರೂಪಾಯಿಯನ್ನು ಇಳಿತಾಯ ಮಾಡದಿದ್ದರೆ ಅವರಿಗೆ ಒಳ್ಳೆಯದು ಎಂದು ಸ್ಟಾಲಿನ್ ಬುದ್ಧಿವಾದ ಹೇಳಿದ್ದು ಸುಳ್ಳಂತೆ.

* * *

ಆಸ್ಪತ್ರೆಯಲ್ಲಿ "ಶೂಲಗಿತ್ತಿ" ಸರಿಯಾಗಿ ಕೆಲಸ ಮಾಡುಲ್ಲ ಅಂತ ಒಬ್ಬರು ಬರೆದಿದ್ದಾರೆ.

—ಹೀಗೆ ಬರೆದರೇ ಸರಿ! ಅಂತ ಹಲವು ಹೆಂಗಸರ ಅಭಿಪ್ರಾಯ.

* * *

ಇಸ್ಪೀಟ್ ಆಟವಾಡುವವರು ಸಾಮಾನ್ಯವಾಗಿ ಯಾವ ಉದ್ಯಮವನ್ನಾದರೂ ಚೆನ್ನಾಗಿ ನಡೆಸಬಲ್ಲರು.—(ಹೇಳಿಕೆ)

—ಒಳ್ಳೇ ಆಟಗಾರರಿಗೆ ಬೇರೆ ಉದ್ಯಮ ಏಕೆ?

ಉರಿಗಾಳು

ಪೌಂಡಿನ ಬೆಲೆ ಕಡಮೆ ಮಾಡಿದಾರೆ, ವಿನಹ, ಅದರ ತೂಕವನ್ನು ಕೊಂಚವೂ ಕಡಿಮೆ ಮಾಡಿಲ್ಲವೆಂಬುದು ಗಮನಾರ್ಹವಾದ ವಿಷಯ.

* * *

ಈ ಸಾರಿ ಆಯುಧಪೂಜೆ ದಿನ ಹಲವರ ಮನೆಗಳಲ್ಲಿ ಗಾಂಧಿ ಟೋಪಿಗಳನ್ನೂ ಪೂಜಿಸುವರಂತೆ.

* * *

ಪಂಜಾಬೀ ಜ್ಯೋತಿಷ್ಕರೂ, ಸಾಮುದ್ರಿಕಾ ಶಾಸ್ತ್ರದವರೂ ಮೈಸೂರಿಗೆ ಹೆಚ್ಚಾಗಿ ಬಂದಿರುವುದಕ್ಕೂ, ಮಂತ್ರಿಮಂಡಲದಲ್ಲಾಗಬಹುದಾದ ಬಡಾವಣೆಗೂ ನಿಕಟ ಸಂಬಂಧವಿಲ್ಲವಂತೆ.

* * *

ಕಲ್ಕತ್ತ ವಿಶ್ವವಿದ್ಯಾಲಯದಲ್ಲಿ ಇಷ್ಟರಲ್ಲೇ "ಮುಷ್ಕರ ಶಾಸ್ತ್ರ"ವನ್ನೂ ಪಾಠಕ್ರಮದಲ್ಲಿ ಸೇರಿಸುವ ಯೋಚನೆ ಇದೆಯಂತೆ.

* * *

ಅಖಂಡ ಕನ್ನಡ ಪ್ರಾಂತ ನಿರ್ಮಾಣಕ್ಕೂ ಕನ್ನಡದ ಏಕೀಕರಣಕ್ಕೂ, ಮೈಸೂರು ಅಡ್ಡ ನಿಂತಿರುವುದನ್ನು ಹಿಂದಿವಾದಿಗಳೂ, ಮಹಾರಾಷ್ಟ್ರ ವೀರರೂ ಸ್ವಾಗತಿಸಿರುವರಂತೆ.

* * *

ಇಂಡಿಯಾ ದೇಶಕ್ಕೆ "ಭಾರತ" ಎಂಬ ಹೆಸರನ್ನಿಟ್ಟು ಹೊಸ ರಾಜ್ಯಾಂಗ ರಚನೆಯಾಗಿರುವುದು, ಕುರುಕ್ಷೇತ್ರದ ಸ್ಮರಣೆಗಾಗಿ ಅಲ್ಲವಂತೆ.

* * *

ಇಂಡಿಯಾ ಪಾಕಿಸ್ತಾನ್ ಒಪ್ಪಂದಗಳು ಯಾವುದನ್ನೂ ಲಿಯಾಖತ್ ಆಲಿಖಾನ್‌ರವರು ಗೌರವಿಸದೆ ಇರುವುದಕ್ಕೆ ಕಾರಣವೇನೆಂದರೆ, ನಾವು ಅವರಂತೆ ಬಲದಿಂದ ರುಜು ಹಾಕದೆ ಇರುವುದಂತೆ.

* * *

ರೂಪಾಯಿ ಬೆಲೆಯನ್ನಿಳಿಸಿರುವುದರಿಂದ, ಮುಂದಿನ ಚುನಾವಣೆಯ ಕಾಲದ ವೋಟಿನ ಬೆಲೆ ಮತ್ತಷ್ಟು ಏರಬಹುದೆಂದು ರಾಜಕಾರಣ ಪಟುಗಳು ಊಹಿಸುತ್ತಿದಾರೆ.

* * *

ಮಂತ್ರಿಗಳ ಸಂಖ್ಯೆ ಈಗಿರುವುದಕ್ಕಿಂತ ಹೆಚ್ಚಾಗುವಾಗ, ಹಾಗೂ ಪಾರ್ಲಿಮೆಂಟರಿ ಕಾರ್ಯದರ್ಶಿಗಳನ್ನೂ ನಿಯಮಿಸಿರುವಾಗ ದೇಶದಲ್ಲಿ ಹೂವಿನ ಹಾರಗಳ ಬೆಲೆ ಏರಬಹುದಾದ್ದರಿಂದ, ಅವರಿಗೆಲ್ಲ ಖಾದೀ ನೂಲಿನ ಹಾರಗಳನ್ನೇ ಅರ್ಪಿಸಬೇಕೆಂಬ ಹುಕುಂ ಹೊರಡಬಹುದಂತೆ.

* * *

ಇಟ್ಟಿಗೆ ಇಲ್ಲದೆ ಮನೆಗಳನ್ನು ಕಟ್ಟುವ ಮತ್ತು ಉಪಾಧ್ಯಾಯರುಗಳಿಲ್ಲದೆ ಶಾಲೆಗಳನ್ನು ನಡೆಸುವ ವಿಧಾನಗಳನ್ನು ಪರೀಕ್ಷಿಸಿ ಹೋಗಲು ಒಂದು ಅಖಿಲ ಭಾರತ ಸಮಿತಿ ಬರುವ ಸಂಭವವಿದೆಯಂತೆ.

* * *

ಮೂರನೆಯ ತರಗತಿ ಡಬ್ಬಗಳಲ್ಲೇ ಪ್ರಯಾಣಮಾಡಿದ್ದರಿಂದ, ಮೈ ಕುಗ್ಗಿ, ಸೊಂಟ ಬಗ್ಗಿ, ಹಲ್ಲು ಮುರಿದು, ಕೃಶರಾಗಿರುವ ಹಲವರನ್ನು ದಸರಾ ಪ್ರದರ್ಶನದಲ್ಲಿರಿಸಿರುವರೆಂಬ ವದಂತಿ ನಿರಾಧಾರವಾದದ್ದಂತೆ. ಈ ಸುದ್ದಿಯಿಂದ ಅವರು ನಿರಾಶರಾಗಿದಾರೆ.

* * *

"ಒಪ್ಪತ್ತು ಊಟ ಪಜಾ ಮಾಡಿರಿ" ಎಂಬ ಚಳುವಳಿಯನ್ನು ನಮ್ಮ ಸಂಸ್ಥಾನದಲ್ಲಿ ಹೂಡುವ ಅವಶ್ಯಕತೆ ಕಂಡುಬರುವುದಿಲ್ಲವೆಂದು ಬರೆಯಲಾಗಿದೆಯಂತೆ.

* * *

ನವರಾತ್ರಿ ಒಂಬತ್ತು ದಿನವೂ, ಸಂಸ್ಥಾನದ ಸಿನಿಮ ಮಂದಿರಗಳಲ್ಲಿ ಪ್ರದರ್ಶಿತವಾಗುವ ಚಿತ್ರಗಳನ್ನೆಲ್ಲ "ನವರಾತ್ರಿ ಪ್ರಯುಕ್ತ" ಎಂದು ಸಾರಲಾಗುವುದಂತೆ.


* * *

—o—

ಪಾಪ! ತಂಬೂರಿಯವ. ಅವ

ಎಲೆ ಮರೆಯ ಹೂವು---ಬೂದಿ ಮುಚ್ಚಿದ ಕೆಂಡ---ಕಂಡೂ ಕಾಣದ ಬೆನ್ನ ಹಿಂದಿನ ದೈವ. ಅಂತೆಲ್ಲಾ ಕೇಳಿದ್ದೀರಿ ಅಲ್ಲವೇ! ಕಾನನದಲ್ಲೆಲ್ಲಾ ನಿಜ ಸೌರಭವ ಸೂಸುವುದಾದರೂ ಎಲೆ ಮರೆಯಲ್ಲಿ ಅವಿತುಕೊಂಡ ಹೂವು, ಎಷ್ಟು ಸೌಜನ್ಯ ತೋರಿಸುತ್ತೆ ಅಂತ ಹಾಡು ಕೇಳಿಲ್ಲವೇ? ಕಣ್ಣಿಗೆ ಬೂದಿಯಂತೆ ಕಂಡರೂ, ಮುಟ್ಟಿದರೆ ಸುಡುವ ಕೆಂಡದ ಅನುಭವ ಇದೆ ಅಲ್ಲವೆ!—ಬೆನ್ನ ಹಿಂದಿನ ದೈವವು ಕಾಣದಿದ್ದುದರಿಂದ ಇಂದೇ ನಾವು ಭವಿಷ್ಯದ ಸವಿಗನಸನ್ನು ಕಾಣುವುದಿಲ್ಲವೇ—ಮಾರನೆಯ ದಿನವೇ ದೈವದ ಕೈವಾಡ ಆ ಸವಿಗನಸನ್ನು ಮಣ್ಣು ಮಾಡುವುದಿಲ್ಲವೇ?

ಉಪಮೆಗೆ ಇವೇ ನಾವು ಸಾಮಾನ್ಯವಾಗಿ ಉಪಯೋಗಿಸುವ ವಸ್ತುಗಳು. ಹೌದು! ಆದರೆ ಹಿರಿಯದಾದ ನಮ್ಮ ಅನುಭವಕ್ಕೆ ಬಂದ ಒಂದು ವಸ್ತುವನ್ನು ನಾವೆಲ್ಲಾ ಮರೆತೇ ಹೋಗಿದ್ದೇವೆ. ಅದು—ತಂಬೂರಿಯ ಹಿಂದಿನವ.



ಒಂದು ಸಂಗೀತ ಕಛೇರಿ ಅನ್ನಿ. ಮೊದಲು ತಂತಿ ಮೀಟಿ ಶೃತಿ ಹಿಡಿಯುವವನು ತಂಬೂರಿಯವ. ಅವನ ನಾದಕ್ಕೆ ಪಿಟೀಲಿನವನು ತನ್ನ ತಂತಿಗಳನ್ನು ಸರಿಪಡಿಸಿಕೊಳ್ಳುತ್ತಾನೆ. ಇವರಿಬ್ಬರನ್ನೂ ತಬಲದವನು ಹಿಂಬಾಲಿಸಿ ಕುಟ್ಟಿ ಕುಟ್ಟಿ ನಾದ ಹದಗೊಳಿಸುತ್ತಾನೆ. ಆ ವೇಳೆಗೆ ಕಂಠಶ್ರೀ ಇದ್ದಾಕೆ ಅಥವಾ ಇದ್ದಾತ ತನ್ನ ಗಂಟಲ ನರಗಳನ್ನು ಸರಿಪಡಿಸಿಕೊಳ್ಳುತ್ತಾಳೆ—ವಾ—ನೆ. ಇದೆಲ್ಲಕ್ಕೂ ಹಿಂಬಲ ಅಥವಾ ಬೆಂಬಲ ಅಂದರೆ ತಂಬೂರಿಯವ. ಆತ ಕಛೇರಿ ಶುರು ಮಾಡಿದಾಗಿನಿಂದ ಒಂದೇ ಸಮನೆ, ನಾಲ್ಕು ನಾಲ್ಕೂವರೆ ಗಂಟೆ ಒಂದು ಮೊಣಕಾಲು ಇಲ್ಲಾ ಇನ್ನೊಂದು ಮೊಣಕಾಲ ಮುಂದೆ

ತಂಬೂರಿಯನ್ನು ನಿಲ್ಲಿಸಿಕೊಂಡು, ಗಾಣಕ್ಕೆ ಕಟ್ಟಿದ ಎತ್ತಿನಂತೆ ತಂತಿಗಳನ್ನು ಮೀಟಿದ್ದು ಮೀಟಿದ್ದೇ. ಕಛೇರಿಯಲ್ಲಿ ಅಂತಹ ಜೀವಾಳದ ಪಾತ್ರ ಧರಿಸಿದವನನ್ನು ಯಾರಾದರೂ ಜ್ಞಾಪಿಸಿಕೊಳ್ಳುತ್ತಾರೆ ಅಂತೀರಾ? ಕಡೆಗಣ್ಣಿನಲ್ಲಿ ನೋಡುತ್ತಾರೆ ಅಂತೀರಾ? ಉಹ್ಞು—ಆವನೊಬ್ಬ ಎಲೆ ಮರೆಯ ಹೂವು—ಬೆಂಕಿ ಮುಚ್ಚಿದ ಕೆಂಡ—ಬೆನ್ನ ಹಿಂದಿನ ದೈವ.

ಮೊನ್ನೆ ಒಂದು ಅಮೋಘವಾದ ಕಛೇರಿ ಆಯಿತು. ಸಿಲ್ಕು ಜುಬ್ಬಾಗಳು—ಸರಿಗೆ ಅಂಚಿನ ಅಂಗವಸ್ತ್ರಗಳು, ಮುಖಮಲ್ ಚಪ್ಪಲಿಗಳು ಅಮೋಘವಾಗಿ ಬಂದಿದ್ದುವು. ಯಾರದಪ್ಪಾ ಕಛೇರಿ! ಇಷ್ಟು ಜನ ಸಂಗೀತಗಾರರಂತೆಯೇ ಉಡುಪು ಧರಿಸಿ ಬಂದಿದ್ದಾರಲ್ಲಾ! ಅಂತ ಅನುಮಾನ ಕೂಡ ಬಂತು. ತಂಬೂರಿಯವನ ಮುಂದೆ ಕೂತು ಕ್ಯಾಕರಿಸಿದಾಗಲೇ ಕಛೇರಿ ಯಾರದು ಅಂತ ಗೊತ್ತಾದುದು. ನನಗೆ ತಂಬೂರಿಯವನ ಶ್ರಮಕ್ಕೆ ಯಾರೂ ಒಂದು ಧನ್ಯವಾದ ಹೇಳಲಿಲ್ಲವಲ್ಲಾ ಎಂದು ದುಃಖ. ಕಛೇರಿ ಮುಗಿಯುತ್ತಲೂ, ಕಟ್ಟೆಯ ಕಡೆಗೆ ಓಡಿದೆ. ತಂಬೂರಿಯವನ ಕೈಕುಲುಕಿ, ಭೇಷ್ ಚೆನ್ನಾಗಿ ಬೆಂಬಲ ಕೊಟ್ಟೆ ಎಂದು ನಾನಾದರೂ ಹೇಳೋಣ ಅಂತ. ಅಲ್ಲಿಗೆ ಹೋಗುವ ಹೊತ್ತಿಗೆ ಸಮಾಜದ ಸೂತ್ರಧಾರಿ ಸಿಕ್ಕ. "ಏನಯ್ಯಾ ಬಂದೆ—ಸಂಗೀತಗಾರರ ಪರಿಚಯ ಆಗಬೇಕೋ! ಬಾ! ಬಾ! ಪರಸ್ಪರ ವಿನಿಮಯ ಮಾಡಿಕೊಡುತ್ತೇನೆ ಅಂತ ಸಂಗೀತಗಾರರ ಹತ್ತಿರಕ್ಕೇ ಎಳೆದುಕೊಂಡು ಹೋದ. ಪರಸ್ಪರ ಕುಶಲಗಳಾದುವು. ಆ ಸಂಗೀತಗಾರರನ್ನೇ ಕಡೆಗೆ ಕೇಳಿದೆ—ನಿಮ್ಮ ತಂಬೂರಿಯವನ ಹೆಸರೇನು? ಅವರ ಪರಿಚಯ ಮಾಡಿಸಿಕೊಡುತ್ತೀರಾ. ಅಮೋಘವಾಗಿ ತಂಬೂರಿ ಹಿಡಿದಿದ್ದ ಎಂದೆ. ಆವರು ಒಂದು ನಿಮಿಷ ಅವಾಕ್ಕಾಗಿ "ಅವನೇ ಅವನ ಹೆಸರು........ಹೆಸರು, ಹೆಸರು ನನಗೆ ಗೊತ್ತಿಲ್ಲ. "ಪಯ್ಯಾ!" ಎಂದು ಕರೆಯುತ್ತೇವೆ ಅಂದರು. "ಪಯ್ಯ"ನ ವಯಸ್ಸು ಎಷ್ಟು ಗೊತ್ತೆ? ಅವನಿಗೆ ಷಷ್ಠಿ ಪೂರ್ತಿ ಆಗಿ, ಐದಾರಾದರೂ ವರ್ಷಗಳಾಗಿದ್ದಿರಬೇಕು. ಇಪ್ಪತ್ತು ಇಪ್ಪತ್ತೈದು ವರ್ಷಗಳಿಂದ ಇವನ ಬೆನ್ನ ಹಿಂದೆ ತಂಬೂರಿ ಹಿಡಿದವನ ಹೆಸರು ಕೂಡ ಇವನಿಗೆ ಗೊತ್ತಿಲ್ಲ—ಇದೇ ಕೃತಜ್ಞತೆ.

ಕಡೆಗೆ "ಪಯ್ಯ"ನ ಕೈ ಹಿಡಿದೆ. ಅಯ್ಯಾ ಅಂದೆ. ಈಗಿನ ಕಾಲಕ್ಕೆ ನೀನೆ ಅನಾಸಕ್ತಯೋಗಿ, ಅಂದೆ. ನೀನೇ ನಾದಬ್ರಹ್ಮನ ಜೀವಾಳ ಅಂದೆ. ಸಂಗೀತಗಾರರ ಬೆನ್ನಲ್ಲಿ ಬಿದ್ದ ದೈವ ಅಂದೆ. ಅದಕ್ಕೇ ಯಾರೂ ನಿನ್ನ ಮಹಿಮೆಯನ್ನು ಅರಿಯರು. ಆದರೆ, ನಾನಾದರೂ ನಿನ್ನ ಮೇಲ್ಮೆಯ ಮರ್ಮವನ್ನು ಅರಿತಿದ್ದೇನೆ. ಇಗೋ ನಿನ್ನ ಕಲೆಗೆ, ನಿನ್ನ ಯೋಗಾಭ್ಯಾಸಕ್ಕೆ ನನ್ನ ಕಾಣಿಕೆ ಅಂತ ಒಂದು ಸಿಗರೇಟು ಕೊಟ್ಟೆ.


—ಇಶ್ಕಿ ಶಿಷ್ಯ.

ಕೊರವೇಶ್ವರ ಶತಕ

ಬೀಜಂಗಳೆ ಧರೆಯಂ ನುಂಗೆ, ಹೊಲ ಬೇಲಿನೆಲ್ಲಂ ಮೇದೊಡೆ
ಹೆಂಡಿರ್ ಗಂಡರ ನತ್ಯಗ್ರದಿ ಶಿಕ್ಷಿಸಲ್, ಭೂಪಾಲನಂ
ಪ್ರಜೆಗಳ್ ಭಾದಿಸಲ್, ಪಣ್ಗಳೆ ತರುವಂ ಮೆಲ್ಲೆ
ಜನಿಸಿದರ್ಭಕಂ ಮಾತೆಗ್ವಿಷಮಂ ಗೂಡಿಸಲ್, ಪರಕೊಲ್ಲಲ್
ಹರಕಾವನೇ ಹರಹರಾ ಶ್ರೀ ನಮ್ಮ ಕೊರವೇಶ್ವರಾ ||

—ದಾ ಧೀ.

—o—



"ಮಹನೀಯರೇ! ಇವರೇ 'ಪಿಟೀಲು ಪಟು' ಪಂಚಾಪಕೇಶರು."

ಮದನಕ್ಕೆ ವಿಗ್ರಹ

ನಾವು ಸ್ಕೌಟುಗಳು ಒಂದು ಸಲ ಬೇಲೂರಿಗೆ ಹೋಗಿದ್ವಿ, ನಮ್ಮ ಸ್ಕೌಟು ಮಾಸ್ಟರ್ ಜೊತೇಲಿ. ಅವರಿಗೆ ಕಿವಿ ಸ್ವಲ್ಪ ಮಂದ. ಬುದ್ಧಿ ಚುರುಕು ಅಂತ ಹೇಳ್ತಾ ಇದ್ರಂತೆ, ಅವರ ತಾಯಿ, ಅವರು ಚಿಕ್ಕವರಾಗಿದ್ದಾಗ. ಅವರು ಅಂದರೆ, ಅವರೇನೋ ಅವರ ತಾಯಿನೋ ಅಂತ ಕೇಳಿ, ಮಾನಾ ತೆಗೀಬೇಡಿ. ಆಂ! ಯಾರ ಮಾನ, ಅಂತೀರಾ?

ಹೇಳ್ತಾ ಇದ್ದೆ, ಬೇಲೂರಿಗೆ ಟ್ರಿಪ್ ಹೋಗಿದ್ವಿ ಅಂತ. ಕ್ಯಾಂಪಿನ ಕೂಳು, ಕೇಳಬೇಕೆ? ಆ ಟ್ರಿಪ್ಪಿಗೆ ಎಷ್ಟು ಪುದುವಟ್ಟೋ ಅಷ್ಟಕ್ಕೆ ಸರಿಯಾಗಿ, ಅನ್ನ ನೋಡಿ ಹೊಟ್ಟೆ ಚಾಚಿ, ಅಂತಿದ್ರು. ನಾವೋ ಹೋದೋವ್ರೆಲ್ಲಾ, ನೋಡೋಕೇನೋ ಸಣ್ಣಗೆ ಸಣಕಲಾಗಿದ್ರೂ, ಒಬ್ಬೊಬ್ಬ್ನ ಹೊಟ್ಟೇನೂ ಬಲೇ ದೊಡ್ಡದು. ಮೇಲೆ ನೋಡೋಕೆ ಏನೂ ಕಾಣತಾ ಇರಲಿಲ್ಲ. ಆದರೆ ಹಗೇವಿಗೆ ಹಾಕಿದ ಅಂದರೆ, ಹಾಕಿದ್ದು ಹಾ ಅನ್ನೋದ್ರೊಳಗೆ ಭಸ್ಮ. ಹಾಗಾಗಿ, ನಾವು ಯಾವೂರ್ನಲ್ಲಿ ಹೋಗಿ ಕ್ಯಾಂಪ್ ಮಾಡಿದರೂ, ನಾವು ಊರುಬಿಟ್ಟ ಮಾರನೆಯ ದಿವಸ, ಆ ಊರಿನವನು ಯಾವನಾದರೂ ಹೋಟಲಿನವನು ತನ್ನ ಮನೆ ಸೂರಿಗೆ ಮೈಸೂರು ಹೆಂಚು ತೆಗೆಸಿ ಮಂಗಳೂರು ಹೆಂಚು ಹಾಕಿಸೋವ್ನು! ಇಲ್ಲದೆ ಹೋದರೆ ಮೈಸೂರು ದೋಸೆ ಮಾಡೋದು ಬಿಟ್ಟು, ಬೊಂಬಾಯಿನ ಚಪಾತಿ ಮಾಡೋವ್ನು—ಮಾರೋಕಲ್ಲ, ತಾನು ತಿನ್ನೋಕೆ.

ಬೇಲೂರಲ್ಲೂ ಹಾಗೇ ಆಯ್ತು. ಅಂದರೆ, ಮೈಸೂರು ಹೆಂಚಿಗೆ ಮಂಗಳೂರು ಹೆಂಚು, ದೋಸೆಗೆ ಬದಲು ಚಪಾತಿ ಆಯಿತು ಅಂತ ಅಲ್ಲ. ನಮಗಂತೂ ಯಥಾಪ್ರಕಾರ ಕ್ಲಾಸ್—ಆಗೋದು ತಪ್ಪಲಿಲ್ಲ. ಹೋಟಲಿಗೆ ಹೋದದ್ದೇ, ಒಲೆ ಮುಂದೆ ಕೂತದ್ದೇ, ದೋಸೆ ಹಾಕಿಸಿದ್ದೇ. ಬೆಳಗ್ಗೆ ಅಷ್ಟು ಮುಂಚೇನೇ ನಮ್ಮ ಭುಜಂಗಾನೇ ಹೋಗಿ, ಹಿಟ್ಟೇ ತಿರುವಿಕೊಟ್ಟು ಬಂದಿದ್ದ ನಂತೆ. ನಾವು ಎಷ್ಟೇ ಆದರೂ,—ಏಕೆ ಹೇಳಬೇಕು? ಎರಡೆರಡು ಖಾಲಿ, ಎರಡೆರಡು ಬೆಣ್ಣೆ, ನಾಕುನಾಕು ಚಟ್ನಿ, ಸ್ಯಾಂಪಲ್ ಪಲ್ಯ—ಮೂರು ಮೂರು ಸಲ, ನಾಕು ನಾಕು ಸಲ, ತಿಂದದ್ದೇ ತಿಂದದ್ದು, ಜೇಬಿನಲ್ಲಿ ಚಿಲ್ಲರೆ ಎಣಿಸಿ ಕೋತಾ ಎಣಿಸಿಕೋತಾ.

ನಂಜೊತೇಗೊಬ್ಬ ಬಂದಿದ್ದ. ಅವನ ಹೆಸರು ಹೇಳಿದರೆ ಯಾರಿಗೂ ಗೊತ್ತಾಗೊಲ್ಲ. ಅಡ್ಡ ಹೆಸರು ಹೇಳಿದರೆ ಬೇಗ ಗೊತ್ತಾಗುತ್ತೆ. ರೋತಿ ಅಂತ ನಾವು ಅವನ್ನ ಕೂಗ್ತಾ ಇದ್ದದ್ದು. ಅವನೂ ಬಂದನಪ್ಪ ಅದೇ ಹೋಟಲಿಗೆ.

ನಾವು ಬಂದ ಹಾಗೆ ವೇಳೆಗೆ ಸರಿಯಾಗಿ ಬರಬಾರದೆ? ಬಂದ, ದನ ಕದ್ದು ಕೊಂಡು ಹೋದ ಮೇಲೆ ದಿಡ್ಡಿಬಾಗಿಲು ಮುಚ್ಚಿದ ಹಾಗೆ. ಅವನು ಬರೋ ಹೊತ್ತಿಗೆ ಹೋಟೆಲು ಭಟ್ಟ ಕಾವಲಿ ಕೆಳಗಿಳಿಸಿ ಬೆಂಕಿ ಆರಿಸಿದ್ದ. ಆ ಒಲೆ ಉರಿ ಇಲ್ಲದ್ದನ್ನ ನೋಡಿದನೋ ಇಲ್ಲವೋ, ನಮ್ಮ ರೋತಿಗೆ ಹೊಟ್ಟೆ ಉರಿ ಹತ್ತಿಕೊಂಡಿತು.

ಉರೀತಾ ಉರೀತಾನೇ, ಕ್ಯಾಂಪಿಗೆ ಬಂದ. ಯಾರ ಮೇಲೆ ತೀರಿಸಿ ಕೊಳ್ಳೋದು, ಈ ಉರೀನ? ಚಾಡಿ ಹೇಳಿದ, ಸ್ಕೌಟ್ ಮಾಸ್ಟರಿಗೆ: ಸಾರ್, ಯಾರೋ ಸ್ಕೌಟುಗಳು, ಹೋಟೆಲಿಗೆ ಹೋಗಿ, ಬೇಯಿಸಿದ ಹಿಟ್ಟು ಹೊಟ್ಟೇಗೆ ಇಳಿಸಿಕೊಂಡು, ಹೋಟೆಲಿನವನ ಮುಖಕ್ಕೆ ನಾಮ ಇಟ್ಟುಬಿಟ್ಟು ಬಂದಿದಾ ರಂತೆ; ಆ ಹೋಟಲಿನವನು ಎರಡು ಕೈಲೂ ಬೋಲ್ ಬೋಲ್ ತರಂಗ್ ಬಾರಿಸ್ತಾ ಇದ್ದ—ಅಂತ ಚಾಡಿ ಹೇಳಿದ.

ನಮ್ಮ ಮೇಸ್ಟರಿಗೆ ಕಿವಿ ಸ್ವಲ್ಪ ಮಂದ ಅಂದೆನಲ್ಲ—ತಪ್ಪು, ಮಂದ ಅನ್ನೋದನ್ನ ಹಿತ್ತಾಳೆ ಅಂತ ತಿದ್ದಿಕೊಳ್ಳಿ. ನಾನಾಗಿದ್ದಿದ್ದರೆ ಏನು ಮಾಡ್ತಾ ಇದ್ದೆ—ನಂ ರೋತಿ ಹೇಳಿದ ಮಾತು ನಿಜಾನೋ ಸುಳ್ಳೋ ನೋಡೋಕೆ ಹೋಟಲಿನವನ ಮುಖದ ಮೇಲೆ ನಾಮ ಇದೆಯೋ ಅಂತ ಹೋಗಿ ನೋಡ್ತಾ ಇದ್ದೆ. ಅಲ್ಲಿ ಇಲ್ಲದೆ ಹೋಗಿದ್ದರೆ, ನಾಯಿ ನೆಕ್ಕಿಕೊಂಡು ಹೋಯಿತೇ ಅಂತಾ ನಾದರೂ ಕೇಳಿಬಿಡತಾ ಇದ್ದೆ. ಅವನಿಗೆ ಕೋಪಾ ಬಂದು, "ಇಲ್ಲಾ. ನಿಮ್ಮ ಹುಡುಗರು ಬಂದು, ಕಾಸುಕೊಡದೆ ನನ್ನ ದೋಸೆ ಕಾವಲೀನ ಕಿಲೀನಾಗಿ ನೆಕ್ಕಿ ಬಿಟ್ಟು ಹೋದರು" ಅಂತ ಅಂದಿದ್ದರೆ, ಆಗ ತಿಳೀತಿತ್ತು ಅಳಿಯನ ಬೇಳೆಕಾಳು, ಅಥವಾ ಕಣ್ಣು ಕುರುಡು.

ನಮ್ಮ ಮೇಷ್ಟರು ಏನು ಮಾಡಿದರು ಗೊತ್ತೆ. Fall in ಅಂದ್ರು. ಎಲ್ಲಾ ಇದ್ದದ್ದು ಇದ್ದ ಹಾಗೇ, ಚೆಡ್ಡಿ ಅಂದರೆ ಚೆಡ್ಡಿ, ದಟ್ಟಿ ಅಂದರೆ ದಟ್ಟಿ, ಟವಲು ಅಂದರೆ ಟವಲು, ಎಲ್ಲಾ ಹಾಗೆ ಹಾಗೇ ಸಾಲಾಗಿ ನಿಂತೆವು. ಹೋಟೆ ಲಿಗೆ ಹೋಗಿದ್ದವರಲ್ಲಿ ಯಾರು ಯಾರು ಕಾಸು ಕೊಡದೆ ಬಂದವರು? ಎಂದು ಗರ್ಜಿಸಿದರು. ಯಾರಾದರೂ ಕೊಡದೆ ಇದ್ದರೆ ತಾನೆ? ಯಾರೂ ಕಂ ಕಿಂ ಎನ್ನಲಿಲ್ಲ. "ಹೇಳೊಲ್ಲ, ಅಲ್ವೆ? ನಾನು ಕಂಡುಹಿಡೀತೇನೆ" ಅಂತ ನಮ್ಮ ಮೇಷ್ಟ್ರು "ಬನ್ನಿ, ಒಬ್ಬೊಬ್ಬರಾಗಿ ಹೇಳಿ: On my honour, I have paid all the ಕಾಸು I owe the hotel ಭಟ್ಟ for all the ದೋಸೇಸ್ I have eaten ಅಂತ ಹೇಳಿ" ಅಂದ್ರು. ನಾವೂ ಒಬ್ಬೊಬ್ಬರೂ ಎದೆ ಮೇಲೆ ಕೈಯಿಟ್ಟುಕೊಂಡು 'On my honour', 'on my honour' ಅಂತ ಗುರುವಿಗೆ ತಿರುಮಂತ್ರ ತಿರುಗೂ ತಿರುಗೂ ಒಪ್ಪಿಸಿದೆವು.

ನಾವೇನೋ "ದನ ತಿನ್ನೋ(ವನಿಗೆ ಗೊಬ್ಬರದಾಣೆ ಅನ್ನೋ(ಹಾಗೆ, ಬಿಟ್ಟಿ ಚಟ್ನಿ ಲಪಟಾಯಿಸೋ(ವರು ಕಾಸಿಲ್ಲದೆ ದೋ(ಸೆ ತಿಂದಿದ್ದರೂ On my honour ಅಂತ ಬಾಬಯ್ಯನಾಣೆ ಬೇಕಾದರೂ ಭಿರ್ಕಾಬಿಡೋ(ವ್ರು. ಆದರೆ ಇವತ್ತು ಎಲ್ಲಾ ಕಾಸು 'ತೆತ್ತೇ(ಖಾಲಿದೋ(ಸೆ ಖಾಲಿಮಾಡಿದವರು. ನಮಗೆ ಯಾಕೋ(ಬಲೇ(ಇದಾಗಿಹೋ(ಯಿತು.

ನಮ್ಮ ಮೇ(ಷ್ಟರಿಗೂ ಏನೂ ಇದಾಗದೆ ಇರಲಿಲ್ಲ. "ಎಲಾ, ಹೈಕಳು ನೀ(ವು, ಮುಟ್ಟೆ ತೋ(ರಿಸಿದ ನನಗೇ(ಮಣ್ಣು ಮುಕ್ಕಿಸ್ತೀ(ರಾ? ಬನ್ನಿ, ಬನ್ನಿ. ಬಾಯಿ ಬಿಡಿಸಿಬಿಡುತೇ(ನೆ" ಅಂತ ನಮ್ಮನ್ನೆಲ್ಲಾ ಹಾಗೆ ಹಾಗೇ(ನೇ(ಚೆಡ್ಡಿ ಸಮೇ(ತ, ದಟ್ಟಿ ಸಮೇ(ತ, ಟವಲ್ ಸಮೇ(ತ ಹಿಂಬಾಲಿಸಿಕೊಂಡು ಹೋ(ಗಿ, "ಎಲ್ಲಿ? ಲಾಷ್ ಎಲ್ಲಿ? ಸಾಬೀ(ತಾಗ್ಬೇ(ಕು?" ಅಂತ ಪೋ(ಲೀ(ಸ್ ಇನ್ಸ್ಪೆಕ್ಟರ್ ಕೈಫಿಯತ್ ಕೇ(ಳೋ(ಹಾಗೆ, ಭಟ್ಟರನ್ನ ಕೇ(ಳಿದರು.

ಅದಕ್ಕೆ ಭಟ್ಟರು. ಸ್ವಾಮಿ, ಸುಳ್ಳು ಹೇ(ಳಿದರೆ ನನ್ನ ಒಲೆ ಉರಿದು ಹೋ(ಗಲಿ, ನನ್ನ ಕಾವಲಿ ಕಾದು ಹೋ(ಗಲಿ, ನನ್ನ ದೋ(ಸೆ ತೂತು ಬೀ(ಳಲಿ." ಅಂತ ಆಣೆ ಮೇ(ಲೆ ಆಣೆ ಇಟ್ಟುಕೊಂಡು, ತನ್ನ ಆವತ್ತಿನ ಸಂಪಾದನೆನೆಲ್ಲಾ ಎಣ್ಣೆ ಡಬ್ಬದಿಂದ ಕೈಗೆ ಸುರುವಿಕೊಂಡು, "ನೋ(ಡಿ, ಇಲ್ಲಿದೆ ಹುಡುಗರ ಪುಡಿ ಗಾಸೆಲ್ಲಾ. ಬರಬೇ(ಕಾದ್ದೆಲ್ಲಾ ಬಂದಿದೆ ಅಂತ ಬರಕೊಡು ಅಂದ್ರೂ ಬರಕೊಡ ತೇ(ನೆ. ಆದರೆ ಕೈ ಮಾತ್ರ ಜಿಡ್ಡು" ಅಂತ ಕೈ ತಲೆಗೆ ಒರಸಿಕೊಳ್ತಾ ಅಂದ್ರು.

ನಂ ಮೇ(ಷ್ಟ್ರು — ವಾಮನಮೂರ್ತಿ — ಅದುವರೆಗೆ ಕೂರ್ಮನ ಹಾಗೆ ಕೋ(ಪದ ಕಾಲು ತಲೆ ಎಲ್ಲಾ ಒಳಗಿಟ್ಟುಕೊಂಡಿದ್ದೋ(ರು ಒಂದು ನರಸಿಂಹನ ಹಾಗೆ ಕೋ(ರೆ ಬಿಟ್ಟರು, ಉಗುರು ನೀ(ಡಿದರು ನೋ(ಡಿ—ನಾವು ಭೂಪತಿಗಳು ನಮಗೇ(ನೂ ಆಗದಿದ್ದರೂ—ನಂ ರೋ(ತಿ, ಪಾಪ, ರಂಗು ಇಳಿದುಹೋ(ಗ್ಬಿಟ್ಟ.

ನಮಗೆ ರೋ(ತಿ ಮೇ(ಲೆ ಏನೂ ರೇ(ಗು ಬರಲಿಲ್ಲ. ಅವನಂತೂ ಹೇ(ಳಿ ಕೇ(ಳಿ ರೋ(ತಿ, ಎಳೇ(ನಿಂಬೆ. ಹೇ(ಳ್ಕೊಳ್ಳಿ ಆದರೆ ಈ ಬಲಿತ ಮೇ(ಷ್ಟರು, ಇವರೂ ಕಿಂಡು ಕಿತ್ತಲೆ ಆಗಬೇ(ಕೆ? ಹೀ(ಗೆ ಹಾರಾಡಬೇ(ಕೆ, ನಮ್ಮ ಮೇ(ಲೆ? ಕೊಡಬೇ(ಕು ಇವರಿಗೆ ಬತ್ತಿ, ಎನ್ನಿಸಿತು.

ಮಧ್ಯಾಹ್ನ ದೇ(ವಸ್ಥಾನಕ್ಕೆ ಹೋ(ಗಿ ತಿರಗತಾ ಇದ್ದಾಗ, ಇವರಿಗೆ ಕೈ ಕ್ಕೊಡೋ(ಕೆ ಇದು ಸರಿಯಾದ ಬತ್ತಿ, ಅನ್ನಿಸಿತು. ಮೆಲ್ಲಗೆ ಹಾಗೇ(ಪಕ್ಕದ ಇನ್ನೊಬ್ಬನಿಗೆ ಹೇ(ಳಿದೆ: "ಲೋ(, ದೇ(ವಸ್ಥಾನದ ಮುದನಕ್ಕೆ ವಿಗ್ರಹಾನ ಯಾರೋ(ಸ್ಕ್ಯಾಟು ಜೋ(ಬಿಗೆ ಇಳೀ(ಬಿಟ್ಟ್ಬಿಟ್ಟಿದಾನಂತೆ—ಅಂತ ಭಟ್ಟರು ಗಂಟೆ ಬಜಾಯಿಸ್ತಾ, ಊರಲ್ಲೆಲ್ಲ ಮಂಗಳಾರತಿ ಮಾಡ್ತಾ ಇದ್ರು—ಅಂತ ಮೆಲ್ಲಗೆ

ಹಾಗೇ ಒಂದು ಗುಸುಗುಸು ಹಚ್ಚಿಬಿಡು. ಮಾಸ್ಟರ್ ಕಿವಿವರೆಗೂ ಹೋಗ ಬೇಕು—ಈ ಚಕ್ರಬತ್ತಿ" ಅಂದೆ.

ನಾನು ಅಂದರೆ ಹೇಳಬೇಕೆ? ನಮ್ಮ ಹುಡುಗರು ಅಂದರೆ ಕೇಳಬೇಕೆ? ನಮ್ಮ ಮೇಷ್ಟ್ರು ಅಂತೂ ಹೇಳಬೇಕಾದ್ದೂ ಇಲ್ಲ, ಕೇಳಬೇಕಾದ್ದು ಮೊದಲೇ ಇಲ್ಲ. ಸರಿ, ಯಥಾಪ್ರಕಾರ, ಮಧ್ಯಾಹ್ನದ ಹಾಗೇ fall in. ಕಣ್ಣಿಂದ ಹುಡುಕಿದರು ನಿಕ್ಕರು ಜೇಬ್ನೆಲ್ಲಾ. ಕೈಯಿಂದ ತಡಕಿದರು ಷರಟು ಜೇಬ್ನೆಲ್ಲಾ. "ಯಾರು ತೆಕೊಂಡಿದ್ದೀರಿ? ನಿಜ ಹೇಳಿ. ಬಿಟ್ಟುಬಿಡ್ತೀನಿ" ಅಂದ್ರು. ಏನ್ನ ಅಂತ ಅವರೂ ಹೇಳಲಿಲ್ಲ, ನಾವೂ ಕೇಳಲಿಲ್ಲ. ಸರಿ. On my honour ಹೇಳಿಸಿದರು—ಮದುವೇಲಿ ಪ್ರವರ ಹೇಳಿಸೋ ಹಾಗೆ. ಆದರೂ ಆ ಮೇಷ್ಟ್ರು ಜಪ್ಪಯ್ಯಾ ಅಂದರೂ ನಂಬಬೇಕಲ್ಲ ನಮ್ಮನ್ನ?

ಮುಂದಕ್ಕೆ ಏನ್ಮಾಡ್ತಿದ್ದರೋ, ಏನೋ—ಅಷ್ಟು ಹೊತ್ತಿಗೆ ಅರ್ಚಕರೇ ಅಲ್ಲಿಗೆ ಏಕೋ ಬಂದರು. "ಬಂದು ಬಳಸಿ ಅಡ್ಡಗಟ್ಟಿ ನಿಂದನಾ ಹುಲಿ ರಾಯನು" ಅಂತ ಗೋವಿನ ಕಥೇಲಿ ಕೇಳಿಲ್ಲವೇ, ಹಾಗೆ ಮೇಷ್ಟರು ಮೈ ಬೀಸಿಕೊಂಡು ಅರ್ಚಕರನ್ನ ಅಡ್ಡಗಟ್ಟಿ, ಕೇಳಿಯೇಬಿಟ್ಟರು: "ಏನು ಭಟ್ಟರೇ, ಯಾವ ಮದನಕ್ಕೆ ವಿಗ್ರಹ missing ಊ?" ಅಂತ.

ಭಟ್ಟರು ಬೊಚ್ಚುಬಾಯಲ್ಲಿ ನಗು ತುಳುಕಿಸುತ್ತಾ "ಹಾಗಂತ ಯಾರೋ ಹೇಳಿಕೊಂಡರು ಅಂತ ಕೇಳಿದೆ. ಯಾರದು ಈ ಚೇಷ್ಟೆ? ಮದನ ಕೈ ಅಂದರೆ ಏನಂಥ ಲಘೂನೇ ಸ್ವಾಮಿ? ಅಲ್ಲಿ, ಆ ಕಂಬದ ಮೇಲಿನ ಮೂಲೇಲಿ ಇವೆ ನೋಡಿ—ಐದೈದು ಅಡಿ, ಎರಡೆರಡಡಿ, ಎತ್ತರ, ಅಗಲ—ಅದನ್ನ ಕದ್ದು ಕೊಂಡು ಹೋಗೋದು ಅಂದರೆ?"—ಅಂತ ಅಂದರು.

ನಮ್ಮ ಮೇಷ್ಟ್ರು ಎಷ್ಟಾದರೂ ನಮ್ಮ ಮೇಷ್ಟರೇ. "ಲ್ರೋ, ನನಗೇ ಚೆಳ್ಳೇಹಣ್ಣು ತಿನ್ನಿಸ್ತೀರಾ ನೀವು? ಇರಲಿ ಇರಲಿ, ನಾಳೆ ಬೆಳಗ್ಗೆ ಕ್ಯಾಂಪಿನಲ್ಲಿ ತಲಾ ಮೂರು ಮೂರು ಖಾಲಿ ದೋಸೆ ನಿಮಗೆ ತಿನ್ನಿಸದೆ ಹೋದ್ರೆ, ಮಧ್ಯಾಹ್ನ ಇನ್ನೊಂದು ಸಲ ಈ ದೇವಸ್ಥಾನ ಸುತ್ತಿಸದೇ ಹೋದರೆ, ನನ್ನ ಹೆಸರು ವಾಮನ ಮೂರ್ತೀನೇ ಅಲ್ಲ!" ಅಂದರು.

ಮಾರನೆಯ ದಿನ ನಮಗೆ ಹಾಗೇ ಶಿಕ್ಷೆ ಆಯಿತು. ಸಂತೋಷದಿಂದ ಅದನ್ನ ಅನುಭವಿಸಿದೆವು.

—ಮ. ದನ.

——o——

ಬಲು ಬೆಣ್ಣೆ

ನಮ್ಮ ಶಂಕರು ಮಹಾತ್ಮರ "ದಂಡಿಯಾತ್ರೆ"ಯ ನೆಪದಿಂದ ಕಾಲೇಜು ಮುಗಿಸಿದ್ದ. ಜೀವನದ ರಾಜಕೀಯ ಅಲೆಗಳಲ್ಲಿ ತೇಲಿ ಮುಳುಗಿ ಕಡೆಗೆ ದಡ ಮುಟ್ಟಿದ್ದ. ಏರು ಪೇರು ಜೀವನದಲ್ಲಿ ಎಲ್ಲಾ ದರ್ಜೆಯ ಸ್ನೇಹಿತರೂ ಅವನಿಗೆ ದೊರಕಿದ್ದರು. ಈ ದಡ ಮುಟ್ಟದ ಕಾಲಕ್ಕೆ ಶಂಕರುವಿನ ಹೆಸರ ಹಿಂದೆ ಮಾನ್ಯ ಅಂತ ಬರೆಯುತ್ತಿದ್ದರು.

ಇವನೇನೋ ದಡ ತಟ್ಟಿದ. ಇವನ ಸ್ನೇಹಿತನಾದ ನನ್ನ ಪಾಡು ಹೇಗೆ ಎಂದು ಶಂಭು ಯೋಚಿಸತೊಡಗಿದ. ಇವನಿಗೇ ಬೆಣ್ಣೆ ಹಚ್ಚಿದರೆ ನನ್ನ ಭವಿಷ್ಯವೂ ಸುಗಮ ಎಂದು ಅರಿತುಕೊಂಡ. ಆದರೆ ಶಂಕರು ಚೂಟಿ—ಮಾನ್ಯ ಶಂಕರೂ ಆದರೂ ಚೂಟಿತನ ಪೂರ್ಣ ಹೋಗಿರುಲ್ಲ. ಅಂದಮೇಲೆ ಬೆಣ್ಣೆ ಹಚ್ಚುವ ಕೆಲಸವನ್ನು ನಯವಾಗಿ ಕಾಣದಂತೆ ಮಾಡಬೇಕು ಎಂದು ನಿರ್ಧರಿಸಿದ.

ಶಂಭು—ಮೊಟಾರು ಕಾರ್ಮಿಕ ಶಂಕರನೂ ಭೇಟಿಯಾಗಿ—"ಮಾನ್ಯ' ಶಂಕರೂ! ನಿಮ್ಮ ಮೋಟಾರನ್ನು ನಾನು ನೋಡಿಕೊಳ್ಳುತ್ತೇನೆ. ಅದು ಸುಗಮ ವಾಗಿ ನಡೆಯುವಂತೆ ನಾನು ಜವಾಬ್ದಾರಿ ತೆಗೆದುಕೊಳ್ಳುತ್ತೇನೆ. ಹೇಗೂ ಸಾರ್ವಜನಿಕ ನಿಧಿಯಿಂದ ಮೋಟಾರು ನಡೆಸುತ್ತಿದ್ದೀರಿ. ನನ್ನ ಜೀವನ ನಡೆಸೋದು ಕಷ್ಟವಾಗಲಾರದು" ಎಂದ.

ಶಂಕರೂಗೆ ಸ್ನೇಹಿತರು ಎಂದರೆ ಬಲು ಖುಷಿ. ಕಷ್ಟದಲ್ಲಿ ಭುಜ ಕೊಟ್ಟವ ರಲ್ಲವೇ! ಆಗಲಿ ಎಂದ.

ಮಾರನೆಯ ಬೆಳಿಗ್ಗೆ—ವಾಹನವನ್ನು ಸಿದ್ಧಗೊಳಿಸುತ್ತಿದ್ದ. ಕೆಲಸಗಾರರ ಜತೆ ಮಾಲೀಕನೂ ಒಂದಾದರೆ ಲೋಕದ ಭವಿಷ್ಯ ಚೆನ್ನಲ್ಲವೇ? ಎಂದು ಶಂಕರೂನೂ ಬಂದ. ಬಂದು ನೋಡಿದರೆ! ಈ ಕಾರ್ಮಿಕ ಮೋಟಾರಿನ ಕೀಲು ಕೀಲಿಗೂ ಎಣ್ಣೆ ಹಚ್ಚುವುದಿರಲಿ, ಸಾಕ್ಷಾತ್ ಬೆಣ್ಣೆಯನ್ನೇ ಹಚ್ಚುತ್ತಿದ್ದ.

ಆಗಲೇ ಶಂಕರೂಗೆ ಸ್ವಲ್ಪ ಜ್ಞಾನೋದಯವಾದದ್ದು—ಚೂಟಿ ಎಂದು ಮೊದಲೇ ಹೇಳಲಿಲ್ಲವೇ?

"ಅಯ್ಯಾ! ಕಾಮ್ರೇಡ! ನನಗೆ ಬೆಣ್ಣೆ ಹಚ್ಚುವುದಿರಲಿ, ನನ್ನ ಮೋಟಾರಿಗೇ ಬೆಣ್ಣೆ ಹಚ್ಚುತ್ತಿದ್ದಿ ನೀನು—ನಿನ್ನ ಜತೆ ನಾನು ಮುಂದುವರೆದರೆ ಕಡೆಗೆ ಬೆಣ್ಣೆಯಂತೇ ಜಾರಿಕೊಳ್ಳುತ್ತೀಯೋ ಎಂದು ಭಯ. ಆದ್ದರಿಂದ ಇಷ್ಟು ಬುದ್ಧಿಶಾಲಿಯಾದ ನಿನ್ನನ್ನು ಸಂಸ್ಥಾನಾಮಳಿ ಸರಕಾರೀ ಮೋಟಾರುಗಳ ಮೇಲಧಿಕಾರಿಯಾಗಿ ನೇಮಿಸುತ್ತೇನೆ. ನಿನ್ನ ಕೈ ನಯದಿಂದ ನೀನು ಕೇಂದ್ರಕ್ಕೆ ಕೂಡ ಹೋಗಬಹುದು. ಎಂದು ಹೇಳಿ ಅವನಿಗೆ ತನ್ನ ಚಾಕರಿಯಿಂದ ನಿವೃತ್ತಿ ಮಾಡಿಸಿದನಂತೆ.

ಶಂಭುವಿನ ಪುರೋಭಿವೃದ್ಧಿ—ಪ್ರಗತಿ ಜೀವನ—ಬೇರೆ ಕತೆಯೋ ಅಲ್ಲವೆ?

—ಶಂಭು.

—o—



ಇಂಥಾದ್ದೊಂದು ಬಾಟಲ್ ಕೊಂಡುಕೊಳ್ಳೋ! ರಾಮು ಜೀರಿಗೆ ಹಾಕಿಟ್ಟುಕೊಳ್ಳುಕ್ಕೆ ಚೆನ್ನ.

ಗಾಂಧೀ ಜಯಂತಿ—
ಅಲ್ಲಾ
"ಬಾಪೂಜೀ ಜಯಂತಿ"

ಇಡೀ ಭಾರತದಲ್ಲೆಲ್ಲಾ—ರಾಜಕೀಯ ಸಾಮಾಜಿಕ ಜೀವನ ಇರುವ ಹಳ್ಳಿಗಳಲ್ಲೆಲ್ಲಾ—ಗಾಂಧೀ ಜಯಂತಿಯನ್ನು ಅಮೋಘವಾದ ರೀತಿಯಲ್ಲಿ ನಡೆಸಿದರು. ಮಾನ್ಯ ಮಂತ್ರಿಯಿಂದ ಹಿಡಿದು ಸರ್ವಮಾನ್ಯ ಭಂಗಿಯ ತನಕ, ಎಲ್ಲರೂ ಭಾಷಣಗಳನ್ನು ಮಾಡಿದರು. "ಗಾಂಧೀಕೀ ಜೈ" ಕೂಗು ಅಮೇರಿಕಾದ ಯುನೋ ಕಛೇರಿಗೂ ಕೇಳಿಸಿತಂತೆ.

ಆದರೆ ನಮ್ಮೂರಲ್ಲಿ ನಡೆದ ಗಾಂಧೀ ಜಯಂತಿಯೇ ಬಲು ಚೆನ್ನು. ನಾವು ಗಾಂಧೀ ಸಪ್ತಾಹವನ್ನೇ ನಡೆಸಿದೆವು. ಬೆಳಿಗ್ಗೆ ಎಲ್ಲಾ ಹುಡುಗರ ಕೈಲಿ ನೂಲಿಸುವುದು, ಸಾಯಂಕಾಲ ಭಾಷಣ, ನಂತರ ಮಂಗಳ, ಚರ್ಪು. ಒಂದು ದಿನ ಕಡಲೇಕಾಯಿ ಗುಗ್ಗುರಿ. ಒಂದು ದಿನ ಮೇಕೆ ಹಾಲು ಕೀರು—ಒಂದು ದಿನ ಗೆಣಸು ತುರಿ—ಒಂದು ದಿನ ರಸಾಯನ ಇತ್ಯಾದಿ ಗಾಂಧೀ ಪ್ರಿಯ ಚರ್ಪು. ಉತ್ಸಾಹದ ಭರದಲ್ಲಿ ಸಿಕ್ಕಿಕೊಂಡು ನೂಲುವ ಹುಡುಗರು ಸಾಕಷ್ಟು ಜನ ಇದ್ದರು.

ಆದರೆ ಈ ಭಾಷಣಗಳಿಗೆ—ತಲೆನೋವು. ಏಳು ಜನ ಭಾಷಣಕಾರರು ಬೇಕು. ಯಾರ್ಯಾರನ್ನು ಹಿಡಿಯೋಣ ಎಂದು ಕಾರ್ಯಕಾರೀ ಸಮಿತಿಯು ಯೋಚಿಸಲು ಕುಳಿತಿತು. "ಮಾನ್ಯ ಮಂತ್ರಿಗಳು" ಎಂದೊಬ್ಬ. "ಬೇಡ ನಮ್ಮೂರಿಗೆ ನಳ ಬಂದಿಲ್ಲ ಅವರೇಕೆ ಬರಬೇಕು" ಎಂದು ಇನ್ನೊಬ್ಬ. "ಕಾಂಗ್ರೆಸ್ ಪ್ರಾಂತಿಕ ಮುಖಂಡ" ಎಂದು ಸೂಚಿಸಿದ ಒಬ್ಬ. "ಹೋದ ಸರ್ತಿ ಹೇಳಿದ್ದೇ ಹೇಳಿದ ಖದ್ದರ್ ಟೋಪಿ ಅವ ಬೇಡ" ಎಂದು ಒದರಿದ ಇನ್ನೊಬ್ಬ. ಹೀಗೆ ಸೂಚನೆ ಖಂಡನೆಗಳೇ ಕಾಲು ಗಂಟೆ ನಡೆದವು.

ಆಗ ಅಧ್ಯಕ್ಷರು ತಮ್ಮ ಮೂರಡಿ ಎತ್ತರವನ್ನೂ ಎತ್ತಿ ನಿಂತು ಹೇಳಿದರು. "ಗೆಳೆಯರೇ!—ಕಾಮ್ರೇಡರೇ! ಒಂದೊಂದು ಸರ್ತಿ ಭಾಷಣವಾದಾಗಲೂ, ಕೇಳಿದವರಲ್ಲಿ ಯಾರೊಬ್ಬರೂ ಗಾಂಧೀ ತತ್ವವನ್ನು ಅನುಸರಿಸಿದರು ಎಂದು ನನಗೆ ಖಚಿತವಾಗಲಿಲ್ಲ—ಹೇಳೋರೇನೋ ಅಲ್ಲಲ್ಲಿ ಓದಿದ್ದನ್ನು ಹೇಳುತ್ತಾರೆ. ಆದರೆ ಕೇಳೋರೇನೋ ಹಗಲು ಗನಸು ಕಾಣುತ್ತಿರುತ್ತಾರೆ. ಅಂತಾಗಿ ಈ ಭಾಷಣಗಳಿಂದ ಏನೂ ಪ್ರಯೋಜನ ಕಾಣಲಿಲ್ಲ—ಅದಕ್ಕೇ ಈ ಸಾರ್ತಿ ನಾನು

ಹೊಸ ಸಲಹೆ ಒಂದನ್ನು ಮಾಡಬೇಕೆಂದಿದ್ದೇನೆ—ಅದೇನೆಂದರೆ? ಗಾಂಧೀ ತತ್ವಗಳನ್ನು ಲೇಶವಾದರೂ ಅಭ್ಯಾಸಮಾಡದೆ ಇರುವ ನಮ್ಮೂರ ಹಿರಿಯರನ್ನೂ ಈ ಸಾರಿ ಭಾಷಣಮಾಡಲು ಒತ್ತಾಸೆ ಮಾಡೋಣ. ಅದರಲ್ಲೂ ಭಾಷಣ ಮಾಡೆಂದರೆ ಬೆಚ್ಚಿ ಬೀಳುವ ಜನರನ್ನೇ ಹಿಡಿಯೋಣ. ಹೆದರಿದ ಇಂತಹವರು ಸ್ವಲ್ಪಮಟ್ಟಿಗಾದರೂ ಗಾಂಧೀ ವಿಷಯ ಓದಿಕೊಂಡು ಬಂದೇ ಬರುತ್ತಾರೆ. ಹಾಗೆ ಓದಿದ ಮೇಲೆ ಅದರ ಪರಿಣಾಮ ಅವರ ಮೇಲೆ ಸ್ವಲ್ಪಮಟ್ಟಿಗಾದರೂ ಆಗಲೇಬೇಕು ಅಲ್ಲವೇ? ಹಾಗಾಗಿ ಈ ಸಪ್ತಾಹದಲ್ಲಿ ಏಳು ಜನ ಭಾಷಣಕಾರರು ಗಾಂಧೀ ವಿಷಯವಾಗಿ ಯೋಚಿಸಿ, ಓದಿ, ಮನನಮಾಡಿಕೊಂಡಾಗುತ್ತದೆ. ಕೇಳಿದವರು ಹೇಗಾದರೂ ಇರಲಿ. ಹೇಳಿದವರಾದರೂ ಸ್ವಲ್ಪಮಟ್ಟಿಗಾದರೂ ಉದ್ಧಾರವಾಗುತ್ತಾರೆ.

ಈ ಸಲಹೆಯನ್ನು ನೀವು ಒಪ್ಪುವುದಾದರೆ, ಏಳು ಜನ ಊರ ಮುದುಕರ. —ಹಣ್ಣು ಹಣ್ಣು ಮುದುಕರಲ್ಲಾ! ದೋರೆಗಾಯಿ ಮುದುಕರ ಹೆಸರನ್ನು ಸೂಚಿಸಿ" ಎಂದು ಹೇಳಿದರು.

ಕಾರ್ಯಕಾರೀ ಸಮಿತಿಯವರು ಈ ಅಮೋಘವಾದ ನವೀನ ಸಲಹೆಗೆ ಬೆಂಬಲಕೊಟ್ಟರು. ಏಳು ಜನ ಊರ ಹಿರಿಯರ ಹೆಸರುಗಳನ್ನು ಪಟ್ಟಿ ಮಾಡಿದರು.

ಮೊದಲನೆಯದಾಗಿ "ಅಹಿಂಸಾ" ವ್ರತವನ್ನೇ ಅರಿಯದ ಅದರ ತಿರುಳೇ ಕಾಣದ ಊರ ವೈದ್ಯನನ್ನು ಆಯ್ಕೆ ಮಾಡಿದರು.

ಎರಡನೆಯದಾಗಿ "ಸತ್ಯ"ದ ಮರ್ಮವನ್ನೇ ಅರಿಯದ ಲಾಯರೊಬ್ಬರನ್ನು ಪಟ್ಟಿಯಲ್ಲಿ ನೇರಿಸಿದರು.

ಮೂರನೆಯದಾಗಿ "ಅಸ್ಪೃಶ್ಯತೆ"ಯ ಅರಿವನ್ನೇ ಕಾಣದ ಆದರ ಬೆಂಬಲ ದಿಂದಲೇ ಜೀವನ ನಡೆಸುತ್ತಿದ್ದ "ವಾದ್ಯಾರನ್ನು" ಚುನಾಯಿಸಿದರು.

ನಾಲ್ಕನೆಯದಾಗಿ "ಮುಯ್ಯಿಗೆ ಮುಯ್ಯಿ"—ಅಥವಾ "ಬಿಸಿ ನೆತ್ತಿರಕ್ಕೆ ಬಿಸಿ ನೆತ್ತಿರೇ ಕಾಣಿಕೆ" ಬರೆದ ಪ್ರಸಿದ್ಧ ಗ್ರಂಥಕಾರರನ್ನು ಪಟ್ಟಿಗೆ ಸೇರಿಸಿದರು.

ಐದನೆಯದಾಗಿ ಅಬ್ಕಾರಿ ಕಂಟ್ರಾಕ್ಟರು ಶ್ರೀಯುತ........ಧರ್ಮ ಸಾಗರ ....ಇತ್ಯಾದಿಯವರನ್ನೂ ಪಟ್ಟಿಗೆ ಸೇರಿಸಿದರು.

ಆರನೆಯ ದಿನಕ್ಕೆ ಮತ್ಸ್ಯ ಬಾಹ್ಮಣ, ಹಾಗೂ ಗೋ ಬ್ರಾಹ್ಮಣರ ಮುಖಂಡನಾದ ಊರ ಹಿರಿಯ ಹಾರುವನ ಹೆಸರನ್ನು ಬರೆದುಕೊಂಡರು.

ಏಳನೆಯ ದಿನ—ಮಂಗಳ ದಿನ ಎಂದು—ಈ ಗುಣಗಳೆಲ್ಲವನ್ನೂ ಅಮಿತ ವಾಗಿ ಹೊಂದಿದ ಊರ ಮಾಮೂಲ್ದಾರನನ್ನು ಚುನಾಯಿಸಿದರು.

ಹುಡುಗರ ತಕ್ಲೀಪು—ಗಾಂಧೀ ಟೋಪಿಗಳ ಒತ್ತಾಯ—ಮೇಲಾಗಿ ಆಳುವ ಅಧಿಕಾರದಲ್ಲಿರುವವರ ಭಯ—ಇವುಗಳ ಸಹಾಯದಿಂದ ಈ ಏಳು ಜನರನ್ನೂ ಭಾಷಣಕ್ಕೆ ಕಟ್ಟೆಯೇ ಹಾಕಿದರು.

ಭಾಷಣಕಾರರೆಲ್ಲಾ ಗಾಂಧಿ ಜಯಂತಿಯ ದಿನ ಮಹಾತ್ಮರ ಜಯಂತಿ ಯಲ್ಲಿ ನಾನು ಭಾಗಿಯಾಗಲು ಅವಕಾಶವಿತ್ತವರಿಗೆ ವಂದನೆಗಳು ಎಂದು ಶುರು ಮಾಡಿದವರು, ಕೊನೆಕೊನೇಗೆ ನಮ್ಮ ಬಾಪುಜೀಯ ದಿವ್ಯ ಸಂದೇಶಗಳಿವು. ನೀವೂ ಅವನ್ನೆಲ್ಲಾ ನನ್ನಂತೆ ಆಚರಿಸಿ ಅವರ ಅಮರ ಸಂದೇಶವನ್ನು ಕೃತಾರ್ಥ ವನ್ನಾಗಿ ಮಾಡಿ ಎಂದು ಭಾಷಣ ಮುಗಿಸಿದರು.

ನಾನು ಮೊದಲೇ ಹೇಳಲಿಲ್ಲವೇ? ನಮ್ಮೂರು ಗಾಂಧೀ ಜಯಂತಿ ನವೀನ ರೀತಿಯದು ಅಂತ. ಗಾಂಧೀ ತತ್ವವನ್ನು ಅರಿತು ಅನುಷ್ಠಾನಕ್ಕೆ ತಂದ ಕೀರ್ತಿ ನಮ್ಮೂರಿನ ಏಳು ಜನಕ್ಕೆ ಸಲ್ಲತಕ್ಕದ್ದು. ಮಿಕ್ಕ ಊರುಗಳಲ್ಲಿ ಗಾಂಧೀ ಜಯಂತಿಯನ್ನು ಗಾಂಧೀಗೆ ಟೋಪಿ ಹಾಕಿದವರೇ ನಡೆಸಿದ್ದು. ಯಾರಿಗೆ ಏನು ಪ್ರಯೋಜನ ಅಂತೀನೀ?

ಬಾಪುಜೀಯು ಬದುಕಿದ್ದರೆ ನಮ್ಮೂರಿನಲ್ಲೇ ಒಂದು ವಾರ್ಧಾ ಗ್ರಾಮ ನಡೆಸುತ್ತಿದ್ದರೋ ಏನೋ?

—ಶಿವಣ್ಣ.

ರೂಪಾಯಿ–ಡಾಲರ್ ಸಂಬಂಧ ಬಲು ಕ್ಲಿಷ್ಟವಾದುದು. ಅದರ ವಿಷಯ ನಾನೊಂದೂ ಹೇಳಲಾರೆ. —ಪಂ|| ನೆಹ್ರೂ.

*   *   *

ನಮಗೂ ಪಂ|| ನೆಹ್ರೂಗೂ ಈ ಒಂದು ವಿಷಯದಲ್ಲಾದರೂ—ಏನೂ ವ್ಯತ್ಯಾಸವಿಲ್ಲ.

ವೈದ್ಯನ ಸೌದೆ ವ್ಯಾಪಾರ

ಇದೇನಯ್ಯಾ! ಹೀಗೆ ಬಾಯಿ ಬಿಟ್ಕ್ಕೊಂಡಿದಿ ಶಾಮಣ್ಣ?

"ಇಲ್ಲಾ! ಈಗತಾನೇ ಡಾಕ್ಟರು ಬಂದು ಎರಡು ರೂಪಾಯಿ ಸೌದೆ ತೆಗೆದು ಕೊಂಡರು. ಕೊಂಡ ಸೌದೇನ ಚುನಾಯಿಸಲಿಕ್ಕೇ ಅಂತ ಅರ್ಧ ಗಂಟೆ ಪರೀಕ್ಷೆ ನಡಿಸಿದರು. ಆ ಸೋಜಿಗ ನೋಡಿ ಆಶ್ಚರ್ಯವಾಯ್ತು—ಅದಕ್ಕೇ ಬೆರಗು ಬೆರಗಾಗಿ ಕೂತಿದ್ದೆ" ಅಂದ ಶ್ಯಾಮಣ್ಣ.

'ಅಂಥಾದ್ದೇನಯ್ಯ ಆತನ ಪರೀಕ್ಷೆ'? ಎಂದೆ. ಆಗ ಶಾಮಣ್ಣ ವಿವರವಾಗಿ ಡಾಕ್ಟರು ಸೌದೇ ವರೀಕ್ಷೆ ನಡೆಸಿದ್ದು ಹೇಳಿದ.

"ಮೊದಲು ಇಲ್ಲಿ ಬಿದ್ದಿದೆಯಲ್ಲಾ ಈ ಸೌದೆ, ಇದರ ಮರಿ ಕೊಂಬೇನ ಮುಟ್ಟಿನೋಡಿದರು. ಒಂದು ನಿಮಿಷ ಅದರ ಮೇಲಿಂದ ಬೆರಳನ್ನೂ ಹಿಂದಕ್ಕೆ ತೆಗೆಯಲೇ ಇಲ್ಲ. "ಏನ್ರೀ ಶಾಮಣ್ಣೋರೆ ಇದರ ನಾಡಿ ಇನ್ನೂ ಆಡುತ್ತಾನೇ ಇದೆ. ಆಗಲೇ ಸತ್ತಿದೆ, ಸೌದೆ ಆಗಿದೆ ಅಂತ ಬದುಕಿರೋ ಮರಾನೇ ಇಲ್ಲಿ ಮಡಗಿದೀರಲ್ರೀ" ಎಂದರು. "ಸ್ವಲ್ಪ ಹಸಿ ಡಾಕ್ಟರೇ ಸೌದೆ. ನೀವು ಇದನ್ನು ಮನೆಗೆ ತೆಗೆದುಕೊಂಡು ಹೋಗಿ, ಒಡೆಸಿ, ಸೀಳಿಸಿ. ಬಚ್ಚಲ ಮನೇಲಿ ಒಣಗಿಸಿ, ಅಡಿಗೆ ಮನೇಗೆ ತೊಗೊಂಡು ಹೋಗೋ ಹೊತ್ತಿಗೆ ಸತ್ತು ಸುಣ್ಣವಾಗಿ ಒಣಗಿ ಉರಿಯುತ್ತೆ" ಅಂದೆ ಅದೇ ಧಾಟಿಯಲ್ಲಿ. ಆ ಮೇಲೆ ಒಂದು ತುದಿಯಲ್ಲಿ ತೊಗಟೆ ಸೆಳೆದು ನೋಡಿದರು. "ಏನ್ರೀ ಶಾಮಣ್ಣೋರೆ, ಇದರ ಚರ್ಮ ನೋಡ್ರೀ, ಇದರ ಉಗುರು ಕಣ್ಣು ನೋಡ್ರೀ, ಎಷ್ಟು ಬಿಳಚಿಕೊಂಡಿದೆ. ಇದಕ್ಕೆಲ್ಲೋ ಏನೋ ಪಾಂಡುರೋಗ ಅಂತ ಕಾಣುತ್ರೀ" ಅಂದರು.

ನಾನಂದೆ "ಇಲ್ಲಾ ಡಾಕ್ಟರೇ, ಇದಕ್ಕೆ ಮೊದಲು ಎಲ್ಲೋ ಕಾಮಾಲೆ ಬಂದಿದ್ದಿರಬಹುದು ಅದಕ್ಕೇ ಹಾಗಿದೆ. ಆದರೆ, ಬೆಂಕಿಗೆ ಹಾಕಿದರೆ ಚೆನ್ನಾಗಿ ಸುಡುತ್ತೆ" ಅಂತ.

ಆ ಮೇಲೆ ಆ ಸೌದೆ ತುಂಡಿನ ತುದಿಯಲ್ಲಿ ಕಣ್ಣಿಟ್ಟು ನೋಡಿದರು. "ಶಾಮಣ್ಣೋರೆ" ಅಂದರು. "ಈ ಕಡೆ ನೋಡಿ, ಇದರಲ್ಲಿ ಜೀವರೇಖೇನೇ ಇಲ್ಲವಲ್ಲಾ. ಏನೋ ಜಂತು ಸೇರಿಕೊಂಡಿದೆ ಅಂತ ಕಾಣುತ್ತೆ ಇದರ

ಹೊಟ್ಟೇಲಿ. ಅದು ಹೇಗ್ರೀ ಸುಡುತ್ತೆ ಅಂದರು. ನಾನೂ ನೋಡಿದೆ, ಒಳಗೆ ದೊಡ್ಡ ಪೊಟರೆ. "ಉರಿಯೋವಾಗ ಗಾಳಿ ಚೆನ್ನಾಗಿ ಓಡಾಡಲಿ, ಹೊಗೆ-ಬರದೆ ಇರಲಿ ಅಂತ ಅರಣ್ಯ ಶಾಖೆಯವರು, ಹೀಗೇ ಮರಗಳನ್ನು ಈಗೀಗ ಬೆಳೆಸುತ್ತಾ ಇದ್ದಾರೆ. ಜನಕ್ಕೆ ಉಪಯೋಗ ಹೆಚ್ಚಾಗಲಿ ಅಂತಲೇ ಹೀಗೆ ಮಾಡ್ತಾ ಇದಾರೆ" ಅಂದೆ.

"ಹಾಗೋ, ಹಾಗಾದರೆ ಈ ಮರದ ಸಜೀವ ಹೆಣಾನ ನನ್ನ ಮನೇಗೆ ಕಳಿಸಿ. ಇದರ ಮೊಬಲಗನ್ನ ತಿಂಗಳ ಮೊದಲ ತಾರೀಖಿಗೆ ಕಳಿಸುತ್ತೇನೆ ಎಂದರು.

ಆಗಲೇ ಬಾಯಿಬಿಟ್ಟು ನಾನು ಹೇಳಿದೆ. ಉದಾಧ್ಯಾಯಶ್ಚ—ವೈದ್ಯಾಶ್ಚ—ವೈದ್ಯಾಶ್ಚ—ನೌದೆಮಾರಶ್ಚ—ಕಾರ್ಯಾಂತೆ—ಅಪ್ರಯೋಜಕಾಃ—ಅಂತ. ಖಂಡಿತ ಸಾಲ ಇಲ್ಲ ಎಂದೆ.

ಅವರು ನಿನ್ನ ಸೌದೇಗೆ ಗಿರಾಕಿ ಇಲ್ಲದ ಹಾಗೆ ಮಾಡುತ್ತೇನೆ ಎಂದು ಪಣ ತೊಟ್ಟು ಹೊರಟುಹೋದರು—ಅವರ ಕಕ್ಷಿಗಾರರೆಲ್ಲಾ ಮೇಲಾಗಿ ಬ್ರಾಹ್ಮಣರ ಕೇರಿಯಲ್ಲೇ—ಅನ್ನೋವಾಗ ಅಂದುಬಿಟ್ಟೆ. ಅವರ ಸೌದೆ ಪರೀಕ್ಷೇನ ಗೇಲೀನೂ ಮಾಡಿದೆ—ಮುಂದೆ ಹೇಗಪ್ಪಾ ವ್ಯಾಪಾರ ಅಂತ ಬಾಯಿ ಬಾಯಿ ಬಿಡೋ ಹಾಗಿದೆ ಎಂದ.

"ಹೆದರಬೇಡ ಶಾಮಣ್ಣಾ—"ಲೋಕೋ ವಿಶಾಲಃ." ಒಬ್ಬ ಡಾಕ್ಟರು ರೇಗಿದರೇನು? ಅಥವಾ ಎಷ್ಟು ದಿವಸ ರೇಗಾನು, ಎಂದಾದರೂ ಔಷಧಿ ಕೊಡಲೇ ಬೇಕು—ಅವನ ಜೀವನ ನಡೆಸಲಿಕ್ಕೆ—ನಿನ್ನ ವ್ಯಾಪಾರ ಕೆಡೋದಿಲ್ಲ—ಅಂತ ಧೈರ್ಯ ಕೊಟ್ಟೆ.

———o———

ಕ್ರಿಪ್ಸ್ ಅವರು ಪೌಂಡಿನ ಬೆಲೆಯನ್ನಿಳಿಸಬೇಕು ಎಂದು, ಕಾಯಿಲೆಯಿಂದ ಗುಣವಾದ ಮೇಲೆ ನಿರ್ಧರಿಸಿದರಂತೆ.

—ಈ ನಿರ್ಧಾರದಿಂದಲೇ ಕಾಯಿಲೆಯು ಗುಣವಾಗಿತ್ತಿಲ್ಲ ಅಂತ ಅನ್ನಿಸುವುದಿಲ್ಲವೇ?

'ಪೇ' ದಿವಸದ ಹಾಡು

(ಪು. ತಿ. ನ. ರವರ ಯುಗಾದಿಯ ಹಾಡಿನಂತೆ)

ಏಳಿ ರವಿಯು ಮೂಡುವೊಳಗೆ
ಹಾಲಿನವಳು ಬರುವುದ್ರೊಳಗೆ
ಇಂದು ಮಧುರ ಮನವ, ಮನೆಯ
ಮುದದಿ ತೇಲಿಸುತ್ತ ಬರುವ!
ಇಂದು 'ಪೇ'—ದಿವಸವು,
ಹೊಸ ತಿಂಗಳದಾದಿಯು!

ನೀರ ನೇದಿ, ಮುಸುರೆ ತಿಕ್ಕಿ
ಕಾಫಿಯೊಲೆಯ ಹಚ್ಚಿ
ನೀವಿ ಕಚ್ಚೆಹಾಕಿ, ತಲೆಗೆ
ಸರಿಗೆ ಸಿಂಬಿ ಸುತ್ತರಣ್ಣ
ಹ ಹ್ಹೊ! 'ಪೇ'—ದಿವಸವು,
ಹರುಷಕೆಲ್ಲ ಗಾದಿಯು!

ಕಳೆದ ತಿಂಗಳೆಲ್ಲ ಮರೆಯರೈ,
ಅಕ್ಕಿ, ಗೋಧಿ, ಸೌದೆ, ಎಲ್ಲ ನೈ,
—ಹಸಿದ ದಿನಗಳೆಲ್ಲ ಮರೆಯುತ
ಮನೆಯ ತರಲೆಯೆಲ್ಲ ದೂರಮಾಡಿ
ಮಸಾಲೆ, ಜಾಮೂನು, ಜಹಂಗೀರು
ಚಿಪ್ಸು, ಬೂಂದಿ ತಿನ್ನರಣ್ಣ!
ಬಡ್ಡಿ, ಗಿಡ್ಡಿ ಕೊಡುವ ಮುನ್ನ,
ಮ್ಯಾಟ್ನಿ ನೋಡಿ ನಲಿಯರಣ್ಣ!
"ತಿಂಗಳೆಲ್ಲ ಮ್ಯಾಟ್ನಿಯು,
ಮಸಾಲೆಯೂಟ ಕಾಣುವ,
ಮತ್ತೆ 'ಫಸ್ಟು' ನೋಡುವ,
ಪಿನ್ನೆ ಪಂಚೆ, ದಿಟ್ಟಕಚ್ಚೆ,
ಗ್ರೇಡು ಇಕ್ರಿಮೆಂಟ್"

—ಎಂದು ಜಹಂಗೀರು ಮುಂದು ಮಾಡಿ
ಉದ್ದಿನೊಡೆಯ ತಿನ್ನರಣ್ಣ!
ಅ ಹ್ಹ! ಬಲ್ಲೆ ನಿಮ್ಮ ಮನವ
ಹಳಿಯ ತಿಂಗಳ ದಳಲನಲವ
ನಿಂದು ನೆನೆದುಕೊಳ್ಳಿರಯ್ಯ—
"ಮನೆಯಾಕೆಗೆ ಮಲ್ಲಿನ ಸೀರೆ,
ನಾಗಜ್ಜೀಗೊಂದ್ ಮಡಿ ಸೀರೆ,
ಲಲಿತಳಿಗೊಂದ್ ಬಣ್ಣದ ಟೇಪು,
ಕಿಟ್ಟೊಗೊಂದ್ ಲೆಕ್ಕದ ಪುಸ್ತಕ"
—ಎಲ್ಲವು ಮುಂದಿನ ತಿಂಗಳು ಕೊಳ್ಳುವನೆಂದು
ಭುಜವ ತಟ್ಟಿ ನಿಲ್ಲಿರಯ್ಯ!

ದೊಡ್ಡ ಸಾಹೇಬರಿಗೆ ನಮಿಸರಯ್ಯ
ಹರಸಿ 'ಗ್ರೇಡು' ಎಂಬರಯ್ಯ
ಹಾಲಿಸವಳಿಗೆ ದುಡ್ಡು ಕೊಟ್ಟು
ಕಾಫಿ ಕುಡಿಯಿರೈ
ರೆಂಟು ಕೊಟ್ಟು ಕುಣಿದಾಡಿರೈ
ಬಡ್ಡಿ ಕೊಟ್ಟು ಎದೆಯ ನಿಮಿರಿ ಓಡಾಡಿರೈ
ಹೋದುದೆಲ್ಲ ಹೋದುದೈ!
ಹೊಸದು ಬಾಳು ನಮ್ಮದೈ
ಇಂದು 'ಪೇ'—ದಿವಸವು
ನಮ್ಮ ಹರುಷವೆಲ್ಲ ಒಂದೆ ದಿವಸವು.

— ಹಾ. ರಾ.

——o——

ಮೂರು ದಿವಸ ಬ್ಯಾಂಕುಗಳಿಗೆ ರಜಾಬಂತಲ್ಲಾ ಅಂತ ಜನ ಧಾರಾಳವಾಗಿ ಚೆಕ್ಕುಗಳನ್ನು ಬರೆಯುತ್ತಿದ್ದಾರಂತೆ.

*   *   *

ಪೀಟರ್ ಕೊಯಿನಾಂಗೆ ಅವರು ಭಾರತದಲ್ಲಿ ಎಲ್ಲೆಲ್ಲೂ ಹೇಳಿದ ಹೇಳಿಕೆ ಯೇನೆಂದರ—"ನಾನು ಆಫ್ರಿಕನ—ಆದರ ಮಲಸ್ ಆಫ್ರೀಕಾದವನಲ್ಲ—ಕೆನ್ಯಾ ಆಫ್ರೀಕಾದವನು" ಅಂತ.

ನಾಗರೀಕನ ಕರ್ತವ್ಯ

— —

ಹೌದು ಸ್ವತಂತ್ರ ಬಂದಿದೆ ನಮ್ಮನ್ನ ನಾವು ತಿಳಿಯಬೇಕು—ನಮ್ಮ ದೇಶದ ಸ್ಥಿತಿ ಏನು, ನಮ್ಮ ನಾಗರಿಕರ ಗತಿ ಏನು—ಮತ್ತು ನಾಗರೀಕರ ಮತಿ ಹೇಗಿರಬೇಕು. ಒಂದು ಗುಂಡು ಸೂಜಿ ಒಬ್ಬರ ಬೆನ್ನಿಗೆ ಚುಚ್ಚುವುದರಿಂದ ದೇಶಕ್ಕೆ ಹಿತವುಂಟೆ? ನಮ್ಮನ್ನು ನಾವು ತಿಳಿಯಬೇಕು—ನಿನ್ನ ಕೆಲಸ ನೀನು ಮಾಡು—ಶಿಸ್ತು ಸಂಯಮ—ಯಾರು, ಏನು, ಎತ್ತ—ದಿಟವೇ? ಹೌದೆ? ನಾನ್ಯಾರು ಅದನ್ನ ಕೇಳಲಿಕ್ಕೆ—ಕೇಳಲಿಕ್ಕೆ ಹಕ್ಕುಂಟೊ? ಹಕ್ಕಿದ್ದರೂ ಲೆಕ್ಕಿಸುವರಾರು?—ಪ್ರತಿಯೊಬ್ಬರೂ ಅವರವರ ಕರ್ತವ್ಯ ಅವರವರು ಮಾಡುತ್ತಿದ್ದಾರೆಯೆ ಎಂದು ನೋಡುವವರಾರು? ಆಫೀಸುಗಳಲ್ಲಿ ಮೇಜಿನಿಂದ ಮೇಜಿಗೆ ಫೈಲುಗಳು ಶಾಖಾದಿ ಲವಣಗಳಿಂದ ಜರುಗುತ್ತವೆ ಎಂಬುದನ್ನು ಯಾರು ಕಂಡುಹಿಡಿಯಬೇಕು?

ಮುಖ್ಯ ವಿಷಯ ಕರೀಪೇಟೆ—ಕಳ್ಳಮಾಲು—ಕಬ್ಬಿಣ—ಸಿಮೆಂಟು—ಅಕ್ಕಿ—ಇವುಗಳ ಕಳ್ಳ ಗೋಡೌನುಗಳಿಗೆ ಹೋಗುವರಾರು? ಡೌನಿನಲ್ಲಿರುವ ಅಂಥ ಪೇಟೆಯ ದಾರಿ ಕಂಡುಹಿಡಿಯುವವರಾರು?—? ಯಾರು? ಯಾರು!!!

ಅರೆ! ನನಗೇಕೆ ಈ ವಿಷಯ ಪೋಲೀಸರಿಲ್ಲವೆ? ಅಧಿಕಾರಿಗಳಿಲ್ಲವೆ? ಶಾಂತಂ ಪಾಪಂ—ಹಾಗಾದರೆ ನಾನಾರು? ನಾನು ನಾಗರೀಕ—ನನ್ನ ಕಸುಬೇನು? ಏನಾದರೂ ಆಗಲಿ ಇತರರು ತಮ್ಮ ಕಸುಬು ನೆಟ್ಟಗೆ ಮಾಡುವರೆ? ಎಂದು ನೋಡಿ ಹೇಳುವುದು ತಪ್ಪೆ?—ಯಾರ ಮುಂದೆ ಹೇಳುವುದು? ಎಲ್ಲ ಅರ್ಜಿ ಬರೆಯುವುದು—ಗೂಡ್ಸ್‌ಷೆಡ್ಡು—ಫೈಲು ಪ್ರಯಾಣ—ಒಂದೆ ಎರಡೆ ಯಾವುದು ನೋಡಲಿ, ಯಾವುದು ಬಿಡಲಿ.

ಆದರೂ ಈ ಭಾನುವಾರ ಸೈಕಲ್ ಏರಿ ಕೇವಲ ಕಾನಿಷ್ಟಬಿಲ್ಲರುಗಳು ಏನು ಮಾಡುವರು ನೋಡುವ ಎಂದು ಮನಸಾಯಿತು. ಹೊರಟೆ.

ಪಾಪ ಅವರಿಗೆ ಕೊಡುವ ಸಂಬಳವೇನೋ ಸಾಲದು—ಇಲ್ಲದಿದ್ದರೆ ಆ ಜಟಕಾ ಸಾಬಿಗಳನ್ನೇಕೆ ಅವರು ಕಿತ್ತು ತಿನ್ನುತ್ತಿದ್ದರು? ಛೆ ಛೆ—ಏನೋ ಹೇಳಿದೆ—ಶಾಂತಂ ಪಾಪಂ. ಊಫಿ—ದೊಡ್ಡ ಬೀದಿ, ಜನ ಸಂಚಾರವಿಲ್ಲ,

ಒಂದೇ ಜಟಕ ನಿಂತಿತ್ತು. ಅದೇ ತಪ್ಪು—ರಸ್ತೆಯಲ್ಲಿ ಅದು ನಿಲ್ಲೋಣವೆಂದರೇನು—ಆ ಸಾಬಿ ಶಾಸನವಿರುದ್ಧ ಹೋಗಬಹುದೋ? ಸಮಾಜ ಸೇವಕನಾದ ಕಾನಿಷ್ಟಬೆಲ್ಲನು ಅವನನ್ನು ಹಿಡಿದು ಠಾಣೆಗೆ ಕರೆದೊಯ್ದು—ಮೊಕದ್ದಮೆ ಹಾಕಲು ಹವಣಿಸಿದ—ರೂಲ್ಸೂಂದ್ರೆ ರೂಲ್ಸು. ಆದರೆ—ಆದರೆ ಏಕೆ ಠಾಣೆಗೊಯ್ಯಲಿಲ್ಲ!!—ಬೆದರಿಸಿ ಬಿಟ್ಟಿರಬೇಕು ಬಡನಾರಥಿಯನ್ನು—ಎಡಗೈಯ್ಯಿ ಬಲಜೇಬಿಗೆ ಹಾಕಿದ್ದು ನೋಟು ಬುಕ್ಕು ಇಡಲಿಕ್ಕೆ. ಅದಕ್ಕೆ ಎರಡಾಣೆ ಹತ್ತಿದ್ದು ಅವನ ತಪ್ಪಲ್ಲ ಸಾಬಿ ತಪ್ಪು. ನಾಕರಿಕ ಧರ್ಮವೆಂದರೆ ಇದಲ್ಲವೆ!!!

ಕಂಟೋನ್ಮೆಂಟಿನಲ್ಲಿ ಮೂರು ಮಂದಿ ಒಬ್ಬರ ಮಗ್ಗುಲಲ್ಲೊಬ್ಬರು ಹೋಗಿದ್ದಕ್ಕೆ ಠಾಣೆ—ಪುಟ್‌ಪಾತಿನ ಮೇಲೆ—ಭಿಕ್ಷುಕರು—ನೇಟಿವ್ ವೈದ್ಯ—ಬಟ್ಟೆ ಅಂಗಡಿ, ಹಳೆ ಪುಸ್ತುಕದಂಗಡಿ—ಏನು ಕಲೆ ಇದ್ದರೂ ತೆಗೆಯುವ ಪುಡಿಯವನ ಬೇಸನ್ನು ನೊರೆ—ಅವನ ಗಿರಾಕಿಗಳಿದ್ದ ಪ್ರಯುಕ್ತ—ರಸ್ತೆಯಲ್ಲಿ ನಡೆದಿದ್ದಕ್ಕೆ ಅರೆಸ್ಟು—ಫೈನು.

ಕೊನೆಗೆ ಕಿವಿನೋವಾಗಿತ್ತು. ವೈದ್ಯರಂಗಡಿಗೆ ಕರೆದೊಯ್ಯಲು ಬಂಡಿ ಮಾಡಿದರೆ, ಒಂದೂವರೆ ಕೈಕಚ್ಚುತ್ತೆ. ನಡೆದು ಹೋದರೆ ಅಂಗಡಿ ಬಾಗಿಲು ಮುಚ್ಚಿದ ಮೇಲೆ ಸೇರೋದೂಂತ ಸೈಕಲ್ ಮುಂದಿನ ಕಂಬಿ ಮೇಲೆ ಟೌಲು ಹಾಕಿ ಕೂಡಿಸಿಕೊಂಡು ಹೊರಟವನು ಸಾಕ್ಷಾತ್ ಪೋಲೀಸ್ ಇನ್ಸ್‌ಪೆಕ್ಟರ ಕೈಗೇ ಸಿಗಬೇಕೆ? ಹೆಸರು, ವಿಳಾಸ, ಫೈನು—ರೂಲ್ಸೂಂದ್ರೆ ರೂಲ್ಸು.

ಎಲಾ ಇದೇನು, ದಾರೀಲಿ ಬರೋರನ್ನ ಹೋಗೋರನ್ನ ಫೈನು ಹಾಕ್ಸೊದು. ಮಾರ್ಕೆಟ್ ಹತ್ರ ದಿನಾಗಲೂ ನಾಲ್ಕೊ ಐದೂ ಕುಣಿಗಲ್‌ಗಳು ಪರ್ಸ್ಸು ಕಳಕೊಳ್ಳುತ್ತವೆ. ಕಂಪ್ಲೇಂಟೂಂತ ಅಲೆದರೂ ನಕ್ಕುಬಿಡ್ತಾರೆ. ಪಿಕ್ ಪಾಕೆಟ್‌ಗಳನ್ನ ಹಿಡಿಬಾರದೆ?

"ಕಳ್ಳಪೇಟೆ ಕದೀಮರು—ಕರೀಪೇಟೆ ಕೊರಮರು—ಲಂಚ ಕೋರರು—ದರೋಡೆಗಾರರು—ಬೀಗ ಒಡೆಯುವವರು—ಖೂನಿ ಕರ್ತರು—ಇವರುಗಳನ್ನು ತಲಾಶುಮಾಡಿ, ನಮ್ಮಗಳನ್ನೇಕೆ ಸತಾಯಿಸುವಿರಿ?" ಎಂದು ನಾನು ಒಬ್ಬ ಆಫೀಸರನ್ನ ಕೇಳಿದೆ. ಕೇಳಿದ್ದರಲ್ಲಿ ತಪ್ಪೇನು? ಕಂದಾಯ ಕೊಡುವ ಸ್ವತಂತ್ರ ನಾಗರೀಕ ಕೇಳುವುದು ತಪ್ಪೆ? ಅಲ್ಲ—ಹಾಗೆ ಕೇಳುವುದು ನನ್ನ ಕರ್ತವ್ಯ—ಹೇಳುವುದು ನಿನ್ನ ಕೆಲಸ ಎಂದು ನನ್ನ ಹಕ್ಕು ಸಾಧಿಸಿದೆ. ಅವನೆಂದ "ಹಕ್ಕು ಸಾಧಿಸಿದರೆ" ಹೇಳೋಲ್ಲ—ಏನೋ ದಯತೋರಿ ಹೇಳ್ತೀನೆ ಕೇಳಿ—ಕಳ್ಳೂರು—ಕರೀಪೇಟೆಯವರು ಸಿಕ್ಕಲ್ಲ. ನಿಮ್ಮಂಥ ರಸ್ತೇಲಿ ನಡಿಯೋರು ಸುಲಭವಾಗಿ ಸಿಗ್ತಾರೆ. ನಾವೇಕೆ ಕಷ್ಟಪಡಬೇಕು? ಕೇಸು ಹಾಕಿದ್ದು ಲೆಖ್ಖವಲ್ಲದೆ—ವಿಷಯ


ಮುಖ್ಯವಲ್ಲ—ಛಾರ್ಜಷೀಟಿನ ಸಂಖ್ಯೆ ಮೇಲೆ ಬಡ್ತಿ. ಖೂನಿಯೆ—ಡಬ್ಬಲ್ ರೈಡೆ ಅದನ್ನ ಕಟ್ಟಿಕೊಂಡೇನು ?.... ...” ಎಂದ.

ಸೈ ಕಣಪ—ಎಂದು ನನಗೇಕೆ ನಾನ್ಯಾರು ?” ಎಂದು ಹೊರಡಲನುವಾದೆ. ಆಗ ಆ ಆಫೀಸರು ನನ್ನ ಕರೆದು “ನಾನ್ಯಾರು ?” ಎಂಬುದನ್ನು ತಿಳಿಯಬೇಕಾದರೆ—ಈ ಪ್ರಪಂಚ—ಈ ಮೋಸ—ತಟವಟ—ಕಳ್ಳತನಗಳಿಂದ ದೂರವಾಗಿ—ತಿರುವಣ್ಣಾಮಲೇಂತ ಒಂದೂರಿದೆ—ಅಲ್ಲಿ ರಮಣ ಮಹರ್ಷಿಗಳೂಂತ ಒಬ್ಬರಿದ್ದಾರೆ ಮಹಾತ್ಮರು—ಅವರು “ನಾನ್ಯಾರು ?” ಎಂಬ ಪ್ರಶ್ನೆ ಬಿಡಿಸ್ತಾರೆ ಅಲ್ಲಿಗ್ಹೋಗಿ ಎಂದು ಹೇಳಿದರು.

ಕಾಡಿಗ್ಹೋಗಿ ಊರ್ಯಾಕೆ ನಿಮಗೆ ಎಂದು ನನ್ನಂತಹ ನಾಗರೀಕನಿಗೆ ಅನ್ನಬಹುದೆ ? ಆತ, ಆಂ.

—ನಾಗರೀಕ ನಾಗೋಜಿ.

— o —



“ ನವ ಪರಶುರಾಮನ ನವ ಸರ್ಕಸ್ ”

ಇದನ್ನು ಓದಬೇಡಿ

ತಲೆ ಬರೆಹ ನೋಡಿದ್ಮೇಲೂ ಓದೋಕೆ ಶುರು ಮಾಡಿಬಿಟ್ರಾ? ಮನಸ್ಸು ತಡೀಲಿಲ್ವೇ? ಹೋಗ್ಲಿ. ಇನ್ನು ಮುಂದೇನಾದ್ರೂ ಓದ್ಬೇಡಿ. ಇಲ್ಲೇ ನಿಲ್ಲಿಸಿ....

ಬೇಡಿ ಕಣ್ರೀ. ಸುಮ್ಮಸುಮ್ಮನೆ ಮುಂದಕ್ಕೆ ಯಾಕೆ ಓದುತ್ತಾ ಇದೀರಿ? ನಿಮ್ಮ ಉಪಕಾರಕ್ಕೇ ಹೇಳೋದು ಬೇಡಾಂತ........

ಅರೆ, ಏನು ಹಠ ನಿಮ್ದು? ಅಷ್ಟು ಮನಸ್ಸು ಬಿಗಿ ಹಿಡಿಯುಕ್ಕೆ ಆಗೋದಿಲ್ವೇ? ಎಷ್ಟು ಸಲ ಹೇಳ್ಬೇಕ್ರೀ—ಇನ್ನು ಮುಂದುವರಿಯಬೇಡಿ ಅಂತ?........

ಇಷ್ಟು ಓದಿದ ಮೇಲಾದ್ರೂ ನನ್ನ ಬುದ್ಧಿವಾದ ಕೇಳಿ. ಇನ್ನು ನಿಲ್ಲಿಸಿಬಿಡಿ. ಇಲ್ಲೇ ನಿಲ್ಲಿಸಿಬಿಡಿ. ಮುಂದಿನ ಸಾಲು ಓದ್ಬೇಡಿ. ರೀ.. ....ಇಲ್ಲೇ ನಿಲ್ಲಿಸ್ರೀ........

ಅಯ್ಯೋ ರಾಮ, ಎಷ್ಟು ಸಲ ಹೇಳದ್ರೂ ಕೇಳುಲ್ಲವಲ್ಲಾ! ನಿಮಗೇ ಹೇಳ್ತಿರೋದು—ಖಂಡಿತಾ ನಿಲ್ಲಿಸೇ ಬಿಡ್ರಿ ಮುಂದೆ ಓದೋದನ್ನ........

ಅಬ್ಬಬ್ಬಾ, ನಿಜವಾಗ್ಲೂ, ನೀವು ಭಾರೀ ಹಠಗಾರರು. ಬೇಡ್ರೀ ಅಂದ್ರೂ 'ಕೇಳ್ದೆ ಓದುತ್ತಾ ಇದ್ದೀರಲ್ಲಾ. ಕೊನೆಗೆ ನಿಮಗೇ ಗೊತ್ತಾಗುತ್ತೆ ....ಈಗಲಾದ್ರೂ ನಿಲ್ಲಿಸ್ತೀರಾ?........

ಈಗಲೇ ಹೇಳಿಬಿಟ್ಟಿದ್ದೇನೆ. ನಂದೇನೂ ತಪ್ಪಿಲ್ಲ... ....

ರೇಗಿದ್ದೀರಾ, ನನ್ನ ಮೇಲೆ ಕೋಪವೇ? ಆದ್ರೆ ನಾನು ಮೊದ್ಲೇ ಹೇಳ್ದೆ ಮುಂದೆ ಓದಬೇಡೀಂತ.... ...

ಪಾಪ, ಛೇ ನಿಮ್ಮ ಶ್ರಮ ನೋಡಿ ನಂಗೆ ದುಃಖವಾಗುತ್ತೆ. ಕೊನೇ ಸಾಲಾದ್ರೂ ಬಿಟ್ಬಿಡಿ........

ಇಷ್ಟೊಂದು ಓದಿ ಕಷ್ಟಪಟ್ರಲ್ಲಾಂತ ಒಂದು ಗುಟ್ಟು ಹೇಳಿಬಿಡ್ತೇನೆ .. .... ಬೇಡದಿದ್ರೆ ಮುಂದೆ ಓದಬೇಡಿ. ....

ಇದು "ರೀಡರ್ಸ್ ಡೈಜಸ್ಟ್"ನಿಂದ ಕಾಪಿ ಮಾಡಿದ್ದು!

—ಎಸ್ಜಿ.

—o—

ಜೀವನದ ಮಟ್ಟ

ನಮ್ಮೂರಿಗೆ ಈಚೆಗೆ ಉದ್ಧಾರಮಾಡೋರು ಬರ್ತಾಇದಾರೆ. ನಾವು ಹಾಕಿಕೊಟ್ಟ ಹಸುರುವಾಣಿ ಚಪ್ಪರದಡೀಲಿ ನಿಂತು ಅವರು ಗಂಟೆಗಟ್ಟಲೆ ಭಾಷಣ ಮಾಡ್ತಿದಾರೆ. ಅವರ ಚಪಲ ಅವರಿಗೆ; ಪಾಪ, ಪಟ್ಟಣದೋರು, ಮಾತು ಅಂದ್ರೆ ಮಾತು. ನಮ್ಮೂರಿನವರೂ ಅವರಿಂದ, ಹೊಸ ಮಾತು ಅನೇಕ ಕಲಿತುಕೊಂಡಿದಾರೆ. ನಾವೂನೂ ಬಾಯಿತುಂಬ, ಆ ಮಾತುಗಳನ್ನ ಬಳಸುತ್ತಿದೇವೆ. ಅದರ ಅರ್ಥ ಗೊತ್ತಿಲ್ಲ. ಆದರೂ, ಆಡುತ್ತೇವೆ ಸಲೀಸಾಗಿ. ವಾತಾವರಣ ಅಂತ ಒಂದು ಹೊಸ ಬಗೆ ವಾತ; ಸುವರ್ಣಾಕ್ಷರ ಅಂಬೋ ಒಂದು ಹೊಸ ತರಹ ಕಾಜಗ, ಅದರಲ್ಲಿ ಬರೆದಿಡುತ್ತಾರಂತೆ, ಏನೇನೋ, ಇನ್ನು ಮೇಲೆ; ಬ್ರಾಂದಿಗಿಂತ ಬಲು ಅಪಾಯುವಂತೆ ಅಂದೆಂಥದ್ದೋ ಕ್ರಾಂತಿ; ಚಳುವಳಿಗಿಂತ ಗಡಿಬಿಡಿಯಂತೆ ಅದೇನೋ ಒಂದು ಹೊಸ ಸಂಗತಿ, ಚಳುವಳಿ ಅನ್ನೋದು; ಮಕುಟಪ್ರಾಯ ಅನ್ನೋ ಒಂದು ಬಗೆ ಪ್ರಾಯ ಬಂದಿದೆಯಂತೆ ನಮ್ಮಂಥ ರೈತರಿಗೆ; ನಾವು ಇನ್ನು ಮೇಲೆ ಅವರಿವರ ಕಾಲಮೇಲೆ ನಿಲ್ಲಬಾರದಂತೆ; ನಾವೂನೂ ಯೋಗಿಗಳಂತೆ, ಮಣ್ಣಿನ ಭೋಗಿಗಳಂತೆ; ಸೊಪರಿಪೂರ್ಣತೆ ಅಂತೆ, ಸಮಗ್ರ ಸಹಕಾರವಂತೆ, ಶುಚಿರ್ಭೂತವಂತೆ,........ಗಾಬರಿಯಾಗುತ್ತೆ, ಕೇಳಿದರೇನೆ! ಮೊನ್ನೆ ಒಬ್ಬರು ಮಾತಿನ ಭರಾಟೆಯಲ್ಲಿ ನಮ್ಮೂರು ಪಟೇಲರು ಬೋರೇಗೌಡರನ್ನೇ ಇರಬೇಕು,—ಬಡಬೋರೇಗೌಡ—ಅಂದರು. ಕೇಳಬೇಕೆ ಕೋಲಾಹಲ? ಪಾಪ! ಲೆಚ್ಚರ್ ಮುಗಿಸಿ, ಕಾರ್ ಹತ್ತಿ, ಕಂಬಿಕಿತ್ತು, ಮನೆ ಸೇರೋದೇ ತಾಪತ್ರಯವಾಗ್ಹೋಯ್ತು.

ಉದ್ಧಾರದವರು ಬಂದು ಹೋಗೋಕೆ ಷುರುಮಾಡಿದ ಮೇಲೆ, ನಮ್ಮೂರಿನ ಬೀಡಿ ಅಂಗಡಿ ಎಲ್ಲ ಬಂದ್! ಎಲ್ಲರೂ ಸಿಗರೇಟಿಟ್ಟುಬಿಟ್ಟಿದಾರೆ, ಈಗ. ಅದನ್ನೇ ಅಂತೆ, ಷಹರ್‌ನಿಂದ ಬರೋ ವಿದ್ಯಾವಂತರೆಲ್ಲ ಸೇದೋದು, ಶೀಮೇಲಿ ತಯಾರಾದದ್ದು, ಪರಂಗಿಯವರು ಸೇದೋದು. ಹೈಕಳೆಲ್ಲ ಬೆಂಗಳೂರು ಕ್ರಾಫ್ ಬಿಡಿಸಿ, ಇಜಾರ ತೊಟ್ಟು, ಕೈಗೆ ಗಡಿಯಾರ ಕಟ್ಟಿಕೊಂಡು, ತಿರುಗುತ್ತಿದಾರೆ; ಟೇಂ ಎಷ್ಟು ಅಂತ ಆ ಗಡಿಯಾರಾನೇ ಕಂಡವರ ಮೂತಿಗೆ ಹಿಡೀತಾರೆ. ಬಾಷಣ ಕೊಡೋಕೆ ಅಂತ ಕಾರುಗಳು ನಮ್ಮ ಹಳ್ಳಿಯೊಳಕ್ಕೆ ನುಗ್ಗುವುದಕ್ಕೆ ಪ್ರಾರಂಭ ಮಾಡ್ದ್ವು ನೋಡಿ........ಮನೇಲಿರೋ ಸಣ್ಣ ಮಕ್ಕಳಿಗೆಲ್ಲ, ಆಟ ಆಡೋದಕ್ಕೆ ಯಾವ ಗೊಂಬೇನೂ ಬೇಕಿಲ್ಲ........ಷಾಪ್‌ನಿಂದ ಮೂರು

ಮೂರೂವರೆ ಕೊಟ್ಟು ತಗಡಿನ ಕಾರು, ನಾಲ್ಕಾಣೆ ಐದಾಣೆ ಕೊಟ್ಟು ಕರ್ಪೂರದ ಕೈಗಡಿಯಾರ ಕೇಳೋಕೆ ಹತ್ತಿವೆ.

ಗಂಡು ಹುಡುಗರ ಅಂಗಿ ಜೋಬಲ್ಲೆಲ್ಲ ಉದ್ದುದ್ದದ ಒಮ್ಮುಖದ ಬಾಚಣಿಗೆ ಕನ್ನಡಿ ಬಂದುಬಿಟ್ಟಿವೆ, ನಮ್ಮೂರಲ್ಲೂ! .. .. ಭಾಷಣ ಕೊಡೋ ಜನರನ್ನ ನೋಡಿ ಕಲಿತದ್ದು ಅದು. ಕಾಲಿಗೆ ಕೆರ ಸಾಲದಂತೆ; ಷಾಪಿನ ಚಪ್ಪಲೀನೂ ಸಾಲದಂತೆ; ಅದೆಂಥದ್ದೋ ಹನ್ನೊಂದು ರೂಪಾಯಿನದು, ಥಳ ಥಳ ಅನ್ನೋ ಮೇಲುಗಾಲಿನ ಪಠಾಣ್ ಷೂನೇ ಆಗಬೇಕಂತೆ, ಷುರುಮಾಡಿಬಿಟ್ಟಿದಾರೆ. ಅಂತು, ಪರದೇಶದೋರು, ಈ ಬಾಚಣಿಗೆ, ಕನ್ನಡಿ, ಬಾಟ್ಲಿ ತೈಲ ಮಾಡೋರೆಲ್ಲ ಉದ್ಧಾರಾಗ್ತಾರೆ, ನಿಜ!

ನಮ್ಮೂರಿಗೆ ಪಟ್ಟಣಗಳಿಂದ ಬರೋ ಭಾರಿ ದೊಡ್ಡಮನುಷ್ಯರಿಗೆಲ್ಲ, ಟೇಬೀಲಿ ಕಾಫಿ ತಿಂಡಿ ಆಗಲೇಬೇಕು; ಅದನ್ನ ನೋಡಿ, ನಮ್ಮ ಹೈಕಳೂ ಮಾತೆತ್ತಬೇಕಾದರೆ, "ತಕೊಂಬಾ, ಎರಡು ಸಿಹಿ, ಎರಡು ಖಾರ, ಒಂದೊಂದು ಕಾಫಿ, ಆಮೇಲೆ ಅದೆಂಥದ್ದೋ ಬೀಡ ಅಂತ ಲವಂಗ ಚುಚ್ಚಿದ್ದು" ಅಂತಾರೆ. ಅಷ್ಟೂ ಸಾಲದು, ಅವರಿಗೆ. ನೋಡಿ ಕಲಿಯುವುದೆಂದರೆ, ಸಾಮಾನ್ಯವೆ? "ಕೆಲವಂ ಬಲ್ಲವರಿಂದ ಕಲ್ತು, ಕೆಲವಂ ಬಲ್ಲಿದರಿಂದ ಕಲ್ತು" ಅಂತಾರಲ್ಲಾ, ಹಂಗೇನೆ? ಕೂರೋದಕ್ಕೆ ಕುರ್ಚಿಯಂತೆ, ಕೊರಳಿಗೆ ಹಾರ ಅಂತೆ, ಕಿವಿಗೆ ಚಪ್ಪಾಳೆಯಂತೆ, ಅದೆಂಥದ್ದೋ ಅನಾವರಣ ಮಾಡೋದಕ್ಕೆ ಸಲಸಲಕ್ಕೂ ಒಂದೊಂದು ಫೋಟೋನಂತೆ—ಎಲ್ಲಿಂದ ತರೋದು ನಾವು?

ಅಂತು, ನಮ್ಮ ಜೀವನ ಇದೆಯಲ್ಲಾ, ಅದರ ಮಟ್ಟ, ನಿನ್ನೆ ಲೆಚ್ಚರ್ ಕೊಟ್ಟೋರು ಹೇಳಿದ ಹಂಗೆ, ಮಟ್ಟ ಏರುತ್ತಿದೆ. ಸೈಕಲ್ ತುಳೀತಾ, ಹೈಕಳೆಲ್ಲ ಎಂಟು ಮೈಲಿ ದೂರ ಸಿನಿಮ ನೋಡೋಕೆ ಹೋಗ್ತಾ ಇವೆ; ಅಲ್ಲಿಂದ ಬಂದು ಕೆಟ್ಟ ಕೆಟ್ಟದಾಗಿ, ಹಾಡ್ತಿವೆ; ಮೊನ್ನೆ ನಮ್ಮ ಬೆಂಗಳೂರಲ್ಲಿ ನಡೆಸಿದರಲ್ಲಾ, ಷುಜಬೂತಾಗಿ, ಒಂದು ತಿಂಗಳು ಕಾಲ, ಕುದುರೆ ಜೂಜು, ಅದಕ್ಕೂನೂ ನಮ್ಮೂರಿಂದ ಗಾಡಿ ಬಸ್ಸು ರೈಲು ಹತ್ತಿ, ಒಬ್ಬ ಹೋಗಿ, ನೂರು ರೂಪಾಯಿ ತೆತ್ತುಬಂದ. ಯಾರು ಅಂತೀರಿ? "ಬಡ ಬೋರೇಗೌಡ" ಅಂತ ಆತ ಬೈದನಲ್ಲಾ, ಅವರ ಹಿರೀ ಮಗ!

ಇನ್ನೇನು? ಉದ್ಧಾರ ಆದ್ಹಂಗೆ ತಾನೆ, ನಾವು?

—ವೆಂಕಟ.

———o———

ಕೊರವನ ಸಿಂಹಾವಲೋಕನ !

— o —

"ಬದುಕಿ ಹೋದರು ! ಬದುಕಿ ಹೋದರು !" ಎಂದ ಕೊರವ—ಒಂದು ಚಿಟಿಕೆ ನಶ್ಯ ಏರಿಸುತ್ತಾ !

ನಮ್ಮ ಹಣೆಗಳೆಲ್ಲಾ ಜಿಂಕ್ ಷೀಟಿನಂತಾದುವು. ಯಾರು? ಯಾಕೆ? ಯಾವಾಗ? ಎಲ್ಲಾ 'ಯಾ'ಗಳೂ ಎದ್ದು ನಿಂತುವು. ಅವನನ್ನು ಕೇಳಿದೆವು.

"ಪೇಪರ್ ಓದಲಿಲ್ಲವೇ ! ೧೯೪೯ ಅಕ್ಟೋಬರ್ ಹತ್ತು ಆಯಿತು ಎಂದರೆ ನಮ್ಮ ದೇಶದ ದೊಡ್ಡ ದೊಡ್ಡ ಲಾಯರುಗಳೆಲ್ಲಾ ಬದುಕಿ ಹೋದರು" ಅಂತ.

ನಮಗೆ ಅರ್ಥವಾಗಲಿಲ್ಲ. ಹಾಗೇ ಅಂದೆವು.

"ಮಂಕುಗಳಾ ! ಇಷ್ಟೂ ತಿಳಿಯಲಿಲ್ಲವೇ? ಆ ತಾರೀಖಿನಿಂದಾಚೆ ಇಂಗ್ಲೆಂಡಿನ ಪ್ರೀವಿ ಕೌನ್ಸಿಲ್ಲೇ ಇರುಲ್ಲ ನಮ್ಮ ಭಾಗಕ್ಕೆ—ಅಂದ ಮೇಲೆ ದೊಡ್ಡ ದೊಡ್ಡ ಜಮೀನ್ದಾರಿ ಮೊಕದ್ದಮೆಗಳು—ಅವೆಲ್ಲಾ ಇನ್ನು ಮೇಲೆ ಬೇಕಾದ ಹಾಗೆ ಬರುತ್ತಲ್ಲಾ !—ಅವೆಲ್ಲಾ ಇಲ್ಲೇ ಭಾರತದಲ್ಲೇ ಕಡೆಯ ತೀರ್ಮಾನಕ್ಕೆ ಬರುತ್ತವೆ. ಅಂದರೆ ದೊಡ್ಡ ದೊಡ್ಡ ಲಾಯರುಗಳಿಗೆ ಸುಗ್ಗಿಯೋ ಸುಗ್ಗಿ—ಮೊನ್ನೆ ಕಲ್ಕತ್ತಾದಲ್ಲಿ ಪ್ರಧಾನ ನ್ಯಾಯಾಧೀಶರು ರಾಜೀನಾಮೆ ಕೊಡಲಿಲ್ಲವೇ? ಯಾಕೆ ಅಂತೀರಿ—ಇದಕ್ಕೇನೆ" ಅಂದ.

*　　　*　　　*

"ಏನು ಪೆಚ್ಚುಗಳು ಈ ಅಮೇರಿಕನ್ನರು" ಎಂದ ಕೊರವ ಷರಟು ಗುಂಡಿ ಸರಿಮಾಡಿಕೊಳ್ಳುತ್ತ.

"ಯಾಕೆ" ಎಂದೆವು.

"ಮೊನ್ನೆ ನೋಡಿ, ಯಾರೋ ಒಬ್ಬ ಕವಿ 'ಎಜ್ರಾ ಪೌಂಡು' ಎಂಬುವನಿಗೆ ಒಂದು ಸಾವಿರ ಪೌಂಡು ಬಹುಮಾನ ಯಾವುದೋ ಸಂಸ್ಥೆ ಕೊಟ್ಟಿತಂತೆ. ಉಳಿದ ಕವಿಗಳೆಲ್ಲಾ "ಇದು ತಪ್ಪು ಆತ ಮುಸ್ಸಲಿನಿಗೆ ಸಹಾಯಮಾಡಿದ್ದ. ಈಗ ಹುಚ್ಚಾಸ್ಪತ್ರೇಲಿ ಇದಾನೆ ಅವನಿಗೆ ಬಹುಮಾನ ಕೊಡೋದೇ" ಎಂದರು.

ಬಹುಮಾನ ಸಂಸ್ಥೆಯವರು "ನಮಗೆ ತಿಳಿಯಲಿಲ್ಲ ತಪ್ಪಾಯಿತು. ಇನ್ನು ಮೇಲೆ ಬಹುಮಾನವನ್ನೇ ಕೊಡುವುದಿಲ್ಲ" ಎಂದು ಕೆನ್ನೆಗೆ ಹೊಡೆದುಕೊಂಡರಂತೆ.

ಏನು ಹೆಚ್ಚುಗಳು ಅಂತೀನಿ ಇವರು—ಕವಿ, ಹಿರಿಯ ಕವಿ—ಈಗ ಹುಚ್ಚಾಸ್ಪತ್ರೆಯಲ್ಲಿದ್ದಾನೆ ಅಂದರೆ ಅತಿ ಹಿರಿಯ ಕವಿ ಎಂಬುವುದು ಖಂಡಿತ ವಲ್ಲವೇ ಅನ್ನ ಬಾರದಾಗಿತ್ತೇ—ಎಂದ.

* * *

"ಮಂಕುಗಳು ಹಳ್ಳಕ್ಕೆ ಬಿದ್ದರು—ಆದರೆ ಹುಷಾರಾದರೆ ಬದುಕಿಕೊಳ್ಳ ಬಹುದು" ಎಂದ ಕೊರವ. ಕುರ್ಚಿ ಮೇಲಿಂದ ಕೆಳಕ್ಕೆ ಕಾಲು ಇಳೀಬಿಡುತ್ತಾ.

ಪೇಪರ್ ನೋಡ್ತಾ ಇದ್ದ ಕೊರವ.

ಓಹೋ! ಸಮತಾವಾದದ ನಮ್ಮ ಮುಖಂಡರೇ ಇರಬೇಕು. ಇವನು ಹೇಳೋದು ಕೇಳಿದರೆ ಎಂದು ನಾನು ಹೇಳಿದೆ. ಗೊತ್ತಾಯ್ತು ಕೊರವ. ಯಾವ ಮಂಕರು ಎಂತ. ಆದರೆ ಯಾಕೆಹಳ್ಳಕ್ಕೆ ಬಿದ್ದರು ಎನ್ನುತ್ತೀ" ಎಂದೆ.

"ಬಾಪುಜೀ ಶಕ್ತಿ ಇನ್ನೂ ಹತ್ತುವರ್ಷವಾದರೂ ಕಾಂಗ್ರೆಸನ್ನು ಕಾಯುತ್ತೆ, ಮಿಕ್ಕ ಪಕ್ಷಗಳಿಗೆ ರೆಕ್ಕೆಯೇ ಇಲ್ಲ. ಅದಕ್ಕೆ ಸೇರಿಕೊಂಡು ರಸ್ತೆ ಚೌಕದಲ್ಲೆಲ್ಲಾ ಕೂಗಿದರೂ ಗಂಟಲು ಶೋಷಣೆ ಅಷ್ಟೆ. ಆದರೆ ಸ್ವಲ್ಪ ಹುಷಾರಾಗಿ ಸ್ವಲ್ಪ ದಿವಸ. ಅಯ್ಯಯ್ಯೋ! ಅಂತ ಬಾಯಿ ಬಡಿದುಕೊಂಡು, ಇದ್ದ ಸರ್ಕಾರಕ್ಕೆ ಸ್ವಲ್ಪ ತಿನಿಸು ಉಂಟುಮಾಡಿದರೆ—**ನಂತರ**—ದೇಶೋದ್ಧಾರಕ್ಕೆ ಕಾಂಗ್ರೇಸೇ ಗತಿ—ಈಗ ನನಗೆ ಅರಿವಾಯಿತು ಎಂದು ಆ ಪಕ್ಷ ಬಿಟ್ಟು ಗಾಂಧಿ ಟೋಪಿ ಹಾಕಿದರೆ —ಇರೋ ಸರ್ಕಾರ ಅಂತಹವರಿಗೆ—ತಿನಿಸು ತಪ್ಪಿತಲ್ಲಾ ಅಂತಲಾದರೂ—ಶಾಖಾಯ ಲವಣಾಯ ಏನಾದರೂ—ಅರ್ಥವಾಯಿತೇ? ಅಂದ.

* * *

ಊರು ಮನೆಗಳನ್ನೆಲ್ಲಾ ರಾಷ್ಟ್ರೀಕರಣ ಮಾಡಬೇಕಯ್ಯಾ! ಆಗಲೇ ನೋಡು "ಮನೆ ಸಿಗುಲ್ಲ" ವಂಬ ಕೂಗು ನಿಲ್ಲುವುದು. ಎಂದ ಕೊರವ. ಆಲೋಚನಾಪರನಂತೆ ಮುಖವಾಡ ಹಾಕಿಕೊಂಡು.

"ಅದು ಹೇಗಯ್ಯಾ" ಎಂದ ಮಾಸ್ತರು ತಾರಾಶಾಸ್ತ್ರಿ.

"ನೋಡು ಇದ್ದ ಮನೆಗಳನ್ನೆಲ್ಲಾ ರಾಷ್ಟ್ರೀಕರಣ ಮಾಡಿ—ಮಾಲೀಕರು ಗಳಿಗೆ ಪರಿಹಾರ ದ್ರವ್ಯ ಕೊಟ್ಟರೆ—ಅವರುಗಳು ಮನೆಕಟ್ಟಿ ಅಭ್ಯಾಸ ಇದ್ದೋರು, ಯಾವ ಕಾಳಸಂತೇಲಿ ಏನೇನು ಸಿಗುತ್ತೆ ಎಂದು ತಿಳಿದೋರು, ಅವರುಗಳೆಲ್ಲಾ ಬೇರೆ ಬೇರೆ ಮನೆಗಳನ್ನು ಕಟ್ಟಿಕೊಳ್ಳುತ್ತಾರೆ. ರಾಷ್ಟ್ರೀಕರಣವಾದ ಮನೆಗಳನ್ನ ಇತರರಿಗೆ ಕೊಡಬಹುದು—ಅಂದರೆ ಮನೆ ಸಮಸ್ಯೆ ಮುಗಿದಹಾಗೇ ಅಲ್ಲವೇ?

ಎಲ್ಲೋ ಇದರಲ್ಲಿ ಕಳಂಕ ಇದೆ ಅಂತ ಗೊತ್ತಾದರೂ, ಎಲ್ಲಿ ಅಂತ ಗೊತ್ತಾಗಲಿಲ್ಲ.

* * *

ನಮ್ಮ ಗಿಳಿಮೂಗಿನವ ಚಿಂತಾಕ್ರಾಂತನಾಗಿದ್ದ. ಯಾಕೋ ಹೀಗಿದಿ ಅಂತ ಕೇಳಿದೆ. ಮನೇಲಿ ತಾಪತ್ರಯ ಕಣೋ—ಗೊತ್ತಿದೆಯಲ್ಲಾ—ತಾಯಿ—ಹೆಂಡತಿ ಜಗಳ. ಈ ಸಾರಿ ನಾನು ಇವರಿಬ್ಬರ ಮಧ್ಯೆ ಅಡಕತ್ತರೀಗೆ ಸಿಕ್ಕಿದ ಹಾಗೆ ಸಿಕ್ಕಿಬಿಟ್ಟೆ—ಒಂದು ಸೀರೆ ವಿಷಯ. ಎಂದ.

ಅಯ್ಯೋ! ಪಾಪ! ಎಂದು ಪರಿತಪಿಸುತ್ತಿದ್ದೆ.

ಆಗ ಕೊರವ ಅಂದ. "ಇದೇನು ಮಹಾ ಸಮಸ್ಯೆ—ಇದಕ್ಕೆಲ್ಲಾ ಹಿರಿಯರ ಹಾದಿ ಹಿಡಿಯಯ್ಯಾ! ಮುಖಂಡರ ಮಾರ್ಗ ತುಳಿಯಯ್ಯಾ. ರಾಜಕೀಯದ ಗೊಂದಲ ಆದರೆ ಮಂತ್ರಿಗಳು ಏನು ಮಾಡ್ತಾರೆ? ಡೆಲ್ಲಿಗೆ ತಲೆ ಹೋಗೋ ಕೆಲಸ ಇದೆ ಅಂತ ಹೋಗೋದಿಲ್ಲವೇ? ಹಾಗೇ ನೀನೂ ಮನೇಲಿ ಜಗಳ ಅಂದರೆ ಅವತ್ತೇ ಸರ್ಕೀಟ್ ಹೊರಡಯ್ಯಾ! "ಹೆಚ್ಚು ಬೆಳೆ ಬೆಳೀರಿ" ಕಾರ್ಯಕ್ರಮ ಹಳ್ಳಿಯವರಿಗೆ ಹೇಳಿಕೊಡ್ತೀನಿ ಅಂತ ಸರ್ಕಿಟ್ ಹೊರಡಯ್ಯಾ! ಅಂದ.

———o———



ಏನ್ರಪಾ! ಚರಕಾ ಯಜ್ಞ ಆಯಿತೆ?

" ಕಾರ್ಟಿಸೋನ್ "

[ವಾತ ಸಂಬಂಧವಾದ ರೋಗಗಳಿಗೆ "ಕಾರ್ಟಿಸೋನ್" ಎಂಬ ಔಷಧಿಯು ಅಮೂಲ್ಯವಾದುದು. ರಸಾಯನ ಶಾಸ್ತ್ರಪ್ರಯೋಗದಿಂದ ಇದನ್ನು ನಿರ್ಮಿಸ ಲಾಗಿದೆ. ಹಾಗೂ ಕೆಲವು ಬೀಜಗಳಲ್ಲಿ ಇದು ಯಥೇಚ್ಛವಾಗಿ ಸಿಗುತ್ತದೆ.] ಪತ್ರಿಕೆ.

* * *

ಇದು ಒಂದು ದಿನಪತ್ರಿಕೆಯಲ್ಲಿ ಬಂದ ವಿಷಯ. ಆ ದಿನ ನಮ್ಮ ವಠಾರ ದವರೆಲ್ಲಾ ಇದನ್ನು ಒಬ್ಬೊಬ್ಬರಾಗಿ ಓದಿದ್ದೂ ಓದಿದ್ದೇ. ಇದ್ದವರಲ್ಲಿ ಬಹು ಮಂದಿ ವಾತ ಶರೀರದವರೇ. ಬಚ್ಚಲು ಮನೆಯಿಂದ ಅಡಿಗೆ ಮನೆಗೆ ನಡೆದರೆ ವ್ಯಾಯಾಮ ಸಾಕು ಎನ್ನುವವರೇ? ಗುಣ ಅವಗುಣ ಹೇಗಾದರೂ ಇರಲಿ ಕಣಯ್ಯಾ ಹೊಟ್ಟೆಗೆ ತೃಪ್ತಿಯಾದಷ್ಟು ಇಷ್ಟವಾದುದನ್ನೇ ತಿನ್ನಬೇಕು. ಅದೇ ಆರೋಗ್ಯದ ತಳಹದಿ ಎಂದು ಪೂರ್ಣ ನಂಬಿದ್ದವರೇ. ವಾಯು ಪರಮಾತ್ಮ ಕೀಲು ಕೀಲಿನಲ್ಲಿ ಸಂಚರಿಸಿದರೆ ಅದು ಪ್ರಾಚೀನ ಕರ್ಮ ಅಲ್ಲದೇ ಮತ್ತೇನು ಎನ್ನುವ ದೇವ ಸೇವಕರೇ?

ಇಂತಹವರಿಗೆ ಈ ಸುದ್ದಿ ಆನೆಗೆ ಸಿಕ್ಕಿದ ಕಬ್ಬಿನ ಜಲ್ಲೆಯಂತಲ್ಲವೇ?

ಓದಿದ್ದೂ ಓದಿದ್ದೇ! ಇದೆಲ್ಲಿ ಸಿಗುತ್ತೆ ಅಂತ ಕೇಳಿದ್ದೂ ಕೇಳಿದ್ದೇ.

ಆಗಲೇ ನೋಡಿ ನಮ್ಮ ಧನ್ವಂತ್ರಿ. ಜಾ. ಮಾತ್ರೆ ಪಂಡಿತ ಹೇಳಿದ್ದು "ನೋಡ್ರೀ, ಪೇಪರಿನಲ್ಲಿ ಬಂತು. ಅಮೇರಿಕಾದವರು ಕಂಡುಹಿಡಿದಿದ್ದು. ಅಂದರೆ ಎಲ್ಲರೂ ಚಪ್ಪರಿಸುತ್ತಾ ಕೇಳುತ್ತೀರಿ. ಈ ಔಷಧಿ ನಮ್ಮ ಆಯುರ್ವೇದ ದಲ್ಲಿ ಸಾವಿರಾರು ವರ್ಷಗಳ ಹಿಂದೆಯೇ ಹೇಳಲ್ಪಟ್ಟಿದೆ. ಅಮಾವಾಸ್ಯೆ ರಾತ್ರಿ ಈ ಗಿಡದಿಂದ ಕಾಯಿ ಕಿತ್ತು ಬೆಳಗಾಗುವುದರೊಳಗೆ ಅದರ ಬೀಜ ಬೇಯಿಸಿ, ಆ ಕಷಾಯದಿಂದ ಒಂದು ಘೃತ ಮಾಡಿ, ಮೂರು ದಿನ ಸೇವಿಸಿದರೆ ಎಂತಹ ವಾಯು ಇದ್ದರೂ ಹರವಾಗುತ್ತೆ. ಆದರೆ ನನ್ನ ಮಾತು ಕೇಳುವವರಾರು? ಆ ಬೀಜದಲ್ಲೇ ಈ "ಕಾರ್ಟಿಸೋನ್" ಇರುವುದು. ಇನ್ನು ಮೇಲಾದರೂ ನನ್ನ ಘೃತ ಕೊಂಡುಕೊಳ್ಳಿ" ಎಂದು ವ್ಯಾಪಾರಿ ಭಾಷಣ ಮಾಡಿದ. ಭಾಷಣ ಮಾಡಿ ಕುಳಿತುಕೊಳ್ಳಲು ಸೊಂಟಾನ ಬಲಗೈಯಿಂದ ಬಲವಾಗಿ ಅದುಮಿ ಹಿಡಿದುಕೊಂಡೇ ಮೆಲ್ಲನೆ ಕುಳಿತ.

ನಗದಿ ಗುಮಾಸ್ತೆ, ಇನ್ನೂ ಹರೆಯ ವಯಸ್ಸಿನವ ಶುರು ಮಾಡಿದ. ನನಗೇನೋ ಆಯುರ್ವೇದವೂ ಗೊತ್ತಿಲ್ಲ—ಯುನಾನಿ ಮೊದಲೇ ತಿಳಿಯದು. ಆದರೆ, ಬೋಳ ಚಾಮರಾಜಅರಸಿನ ದರ್ಬಾರಿನಲ್ಲಿ ನಮ್ಮ ಮುತ್ತಾತ ಹೆಸರಾಂತ ರಾಮಾ ಪಂಡಿತರು ಇದ್ದರು. ಒಂದು ದಿನ ದಳವಾಯಿ ನೂರಿಪ್ಪತ್ತು ಮೈಲಿ ಒಂದೇ ಸಮನೆ ಕುದುರೆ ಸವಾರಿ ಮಾಡಿ ಊರಿಗೆ ಬಂದಾಗ ಸೊಂಟ ಹಿಡಿದುಕೊಂಡು ಕುದುರೆಯಿಂದ ಇಳಿಯಲಿಕ್ಕೇ ಆಗಲಿಲ್ಲ—ನಾಲ್ಕು ಜನ ಹಿಡಿದುಕೊಂಡು ಇಳಿಸಿದರು. ಮಾರನೆಯ ದಿನವೇ ದಳವಾಯಿ ಫೌಜು ಕಟ್ಟಿಕೊಂಡು ಕವಾತು ಮಾಡಬೇಕಾಗಿತ್ತು. ಹೀಗಾಗಿ ರಾಮಾ ಪಂಡಿತರಿಗೆ ಹೇಳಿ ಕಳಿಸಿದರು. ಆತ ಎರಡು ಕುಪ್ಪಿ ಮಾತ್ರೆ ತೇಯ್ದು ಅವನ ಸೊಂಟಕ್ಕೆ ಲೇಪಿಸಿದ. ದಳವಾಯಿ ಎರಡೇ ನಿಮಿಷದಲ್ಲಿ ಸೂರ್ಯ ನಮಸ್ಕಾರ ಮಾಡುವ ಹಾಗಾದ.

ಆ ಕುಪ್ಪಿ ಮಾತ್ರೇಲಿ ಈ ಕಾರ್ಟಿಸೋನ್ ಇದ್ದೇ ಇದೆ—ಅವರೇ ಮಾಡಿಟ್ಟಿದ್ದ ಕುಪ್ಪಿ ಮಾತ್ರೆಗಳು ಇನ್ನೂ ನಮ್ಮನೆಯ ಮುಂದಾಸನದಲ್ಲಿ ರುದ್ರಸಂಪುಟದಲ್ಲಿ ಇನ್ನೂ ಇದೆ.

ಆದರೆ ಯಾರಿಗೆ ಹೇಳಿಕೊಳ್ಳೋದು—ಅಮೇರಿಕಾದವರು ಹೇಳಿದರೇ ನಮ್ಮ ಜನ ನಂಬೋದು! ಅಂದು ಹೇಳಿದ.

ಹೀಗೆ ತಂತಮ್ಮ ಹಿರಿಮೆಯನ್ನೂ ತಮ್ಮ ಹಿರಿಯರ ತಿಳಿವಳಿಕೆಯನ್ನೂ ಅಮೋಘವಾಗಿ ಹೊಗಳಿದರು.

ಆಗಲೇ ನಮ್ಮ ಸೀತಾಪತಿ, ನಮ್ಮ ಶಾಲೆಯಲ್ಲಿ ವಿಜ್ಞಾನ ಹೇಳಿಕೊಡುತ್ತಾನಲ್ಲಾ ಆ ಮೇಷ್ಟರು—ಮೆಲ್ಲಗೆ ಹಲುಕಿದ್ದು.

"ಹೌದು ಹೌದು. ಇದೆಲ್ಲಾ ಸತ್ಯ. "ಕಾರ್ಟಿಸೋನು" ನಿಮಗೆಲ್ಲಾ ತಿಳಿದೇ ಇತ್ತು. ಅದನ್ನೆಲ್ಲಾ ಉಪಯೋಗಿಸುತ್ತಲೇ ಇದ್ದಿರಿ. ಒಪ್ಪಿಕೊಳ್ಳುತ್ತೇನೆ. ಆದರೆ ಈ ವಾತನೋವೂ, ಈ ವಾಯುನೋವೂ ಏತಕ್ಕೆ ಹೋಗಲಿಲ್ಲ! ಅಮೇರಿಕನ್ನರಿಗೆ ಮೊದಲೇ ನೀವೇ ಯಾಕೆ ಪ್ರಚುರಪಡಿಸಲಿಲ್ಲ!!

ಅಧಿಕ ಪ್ರಸಂಗಿ—ಹುಡುಗ ಬುದ್ಧಿ—ಹಿರಿಯರಲ್ಲಿ ಮರ್ಯಾದೆ ಇಲ್ಲ. ನಮ್ಮದು ಅಂದರೆ, ಅಭಿಮಾನವೇ ಇಲ್ಲ—ಇತ್ಯಾದಿ ಟೀಕೆಗಳಾಗಿ ಸೀತಾಪತಿ ಪಲಾಯನ ಮಾಡಿದ.

—-o—

ಆಯುಷ್ಕರ್ಮದ ಸರಪಳಿ

—o—

ಬೆಳಿಗ್ಗೆ ಏಳು ಗಂಟೆಗೆ ರೈಲು ಬರುವುದು ನಮ್ಮೂರಿಗೆ—ಆ ದಿನ ಆ ರೈಲಿನಲ್ಲಿ ರೆವೆನ್ಯೂ ಹಿರಿಯಧಿಕಾರಿ ನಮ್ಮೂರಿಗೆ ಬರುವುದು. ಆತ ಬರುವ ಹೊತ್ತಿಗೆ ಊರ ಹಿರಿಯ ಪ್ರಜಾಮುಖಂಡ ಎಂದೆನಿಸಿಕೊಂಡ ನಮ್ಮ ಧರ್ಮ ಸಾಗರು ಸ್ಟೇಷನ್ನಿನಲ್ಲಿಲ್ಲದಿದ್ದರೆ—ಎರಡು ನಿಂಬೇ ಹಣ್ಣು, ಒಂದು ಹೂವಿನ ಹಾರ ಅರ್ಪಿಸದೇ ಇದ್ದರೆ ಹೇಗೆ? ದರಖಾಸ್ತು ಅಂತ ಕೆರೆ ಕೆಳಗಿನ ಜಮೀನನ್ನು ತಾನು ಹೇಗೆ ಗಿಟ್ಟಿಸಲು ಸಾಧ್ಯ!

ಧರ್ಮಸಾಗರು ಐದೂವರೆ ಗಂಟೇಗೇ ಎದ್ದ—ಜವಾನನ್ನೆಬ್ಬಿಸಿದ—"ಹೋಗೋ! ಜವರ! ಕ್ಷೌರದವನನ್ನು ಕರಕೊಂಡು ಬಾರೋ—ಬೇಗ ಕ್ಷೌರ ಮಾಡಿಸಿಕೊಂಡು ಸ್ನಾನಮಾಡಿ ರೈಲ್ವೆಸ್ಟೇಷನ್ನಿಗೆ ಹೋಗಬೇಕು ಅಂದ.

ಜವರ ಹೋದ ಒಂದು ಗಂಟೆ ಆದರೂ ಬರಲೇ ಇಲ್ಲ. ಹಾಳು ಆಳು, ಹೊತ್ತಾಗಿ ಹೋಯ್ತು—ಏನು ಮಾಡೋದು ಅಂತ ಶಪಿಸುತ್ತಲೇ ಧರ್ಮಸಾಗರು ಸ್ನಾನ ಮಾಡಿದ—ಕ್ಷೌರ ಇಲ್ಲದಿದ್ದರೆ ಹೋಯಿತು ಅಂತ. ಬೇಗ ಬೇಗ ಬಟ್ಟೆ ಹಾಕಿಕೊಂಡು, ತನ್ನ ಆಯುಧಗಳಾದ ನಿಂಬೆಹಣ್ಣು, ಹೂಮಾಲೆ ಹಿಡಿದು ಸ್ಟೇಷನ್ನಿಗೆ ಹೋದ.

ಅಧಿಕಾರಿಗಳು ಇಳಿದರು. "ಯಾಕೆ ಧರ್ಮಸಾಗರರೇ! ಮೈ ಚೆನ್ನಾಗಿಲ್ಲವೇ. ಜ್ವರ ಬಂದಂತೆ ಕಾಣುತ್ತಲ್ಲ! ಈ ಛಳಿಯಲ್ಲಿ ನೀವೇಕೆ ತೊಂದರೆ ತೆಗೆದುಕೊಂಡು ಬಂದಿರಿ" ಎಂದು ಮಾತನಾಡಿಸಿದರು.

ಏನೋ ಸೌಜನ್ಯವಾಗಿ ಅವರನ್ನು ಮಾತನಾಡಿಸಿ ಮನೆಗೆ ಬಂದರು ಧರ್ಮಸಾಗರು.

ಬಾಗಿಲಲ್ಲೇ ಜವರ ನಿಂತಿದ್ದಾನೆ. ಹತ್ತಿರದಲ್ಲೇ ಕ್ಷೌರದವನೂ ಹಾಜರು. ಇಬ್ಬರ ಮೇಲೆಯೂ ಹಾರಿಬಿದ್ದರು ಧರ್ಮಸಾಗರರು. ಅಧಿಕಾರಿಗಳಿಗೆ ಈ ಖಾಯಿಲೆ ಮುಖ ತೋರಿಸಬೇಕಾಯಿತು. ಬೇಗ ಬರುಕ್ಕೆ ಏನಾಗಿತ್ತೋ ಅಂತ.

[ಇಷ್ಟು ಹೊತ್ತಿಗೆ ನೀವೆನ್ನಬಹುದು ಅಂತಹಾ ಊರ ಹಿರಿಯ— ಧರ್ಮ ಸಾಗರು—ಈಗಿನ ಕಾಲದಲ್ಲಿ ತನ್ನ ಚೌರ ತಾನೇ ಮಾಡಿಕೊಳ್ಳುತ್ತಿರಲಿಲ್ಲವೇ

ಅಂತ—ದಿಟ! ಈಗಿನ ಕಾಲದಲ್ಲಿ ಅವರವರ ಚೌರ ಅವರವರೇ ಮಾಡಿ ಕೊಳ್ಳೋದು ಕ್ಷೇಮ—ಇನ್ನೊಬ್ಬರಿಗೆ ಬಿಟ್ಟರೆ ತಲೇನೇ ಬೋಳಿಸಿಬಿಡ್ತಾರೆ—ಆದರೆ ನೋಡಿ, ಧರ್ಮಸಾಗರೂದು ತಿರುಪತಿ ಒಕ್ಕಲು. ಅವರ ಪೂರ್ವಜರು ಯಾರೋ ತಿರುಪತಿ ಬೋಳಾಜಿಯಲ್ಲಿ ಅಪರಾಧ ಮಾಡಿದ್ದರಂತೆ. ಹಾಗಾಗಿ ಅವರ ಕುಲಕ್ಕೇ ಶಾಪ ಬಂದಿತ್ತಂತೆ. ಕುಲದವರು ಯಾರೂ ಕ್ಷೌರದ ಕತ್ತಿ, ಅಲಗೂ ಕೂಡ ಹಿಡಿಯಬಾರದು ಅಂತ. ಬೇಗ ಬೇಗ ಬೊಗಸೆ ಬೊಗಸೆ ಹಣ ಮಾಡಿದವರಿಗೆ ದೇವರು ದಿಂಡರು ಎಂದರೆ ಎಲ್ಲೂ ಇಲ್ಲದ ಭೀತಿ. ಧರ್ಮ ಸಾಗರೂಗೆ ಈ ದೇವರಲ್ಲಿ ಬಲು ನಂಬಿಕೆ. ಹಾಗಾಗಿ ಆತ ತನ್ನ ಚೌರಕ್ಕೂ ತಾನೇ ಕತ್ತಿ ಎತ್ತುವಂತಿರಲಿಲ್ಲ.]

ಆಗ ಕ್ಷೌರದವನು ತಲೆ ಕೆರೆದುಕೊಳ್ಳುತ್ತಾ ಹೇಳಿದ. "ಪ್ರಭೋ! ನಿನ್ನೆ ರಾತ್ರಿ ಒಂದು ನಿಕಾ ಸಂಭಂದದಲ್ಲಿ ಓಲಗ ಊದುವುದಕ್ಕೆ ಹೋಗಿದ್ದೆ. ಬೆಳಗ್ಗಿನಿಂದ ರಾತ್ರಿ ಎರಡು ಎರಡೂವರೆ ಗಂಟೆ ತನಕ ಬಾರಿಸಿದ್ದೆ. ಆ ಮೇಲೆ ಮನೆಗೆ ಬಂದೆ. ಬೆಳಿಗ್ಗೆ ಜನರು ಬಂದು ಎಬ್ಬಿಸಿದಾಗ ಎಚ್ಚರವೇ ಆಗಲಿಲ್ಲ—ಕಡೇಗೆ ಹೆಂಚು ತೆಗೆದು ಒಳಕ್ಕೆ ಇಳಿದುಬಂದು ಕಿವಿಗೆ ನೀರು ಬಿಟ್ಟಾಗಲೇ ಎಚ್ಚರ ವಾದದ್ದು. ಅದಕ್ಕೇ ಹೊತ್ತಾಯ್ತು ಕ್ಷಮಿಸಬೇಕು" ಎಂದು ಹೇಳಿದ.

"ಕೂತುಕೋ ಬಂದೆ" ಅಂತ ಹೇಳಿ, ಧರ್ಮಸಾಗರರು ಒಳಕ್ಕೆ ಹೋಗಿ ಉಡುಪು ಬದಲಾಯಿಸಿ, ರಾಷ್ಟ್ರಪಿತನ ಉಡುಪಿನಲ್ಲಿ ಬಂದು ಮಂಗಳ ಕಾರ್ಯಕ್ಕೆ ಕುಳಿತರು.

ಕ್ಷೌರದವನು ತನ್ನ ಕಸುಬಿನಲ್ಲಿ ಕಲಾಕೋವಿದ. ಧರ್ಮಸಾಗರ ಮುಖ ವನ್ನು ಯಥಾನಾವಕಾಶವಾಗಿ ಸಾಬೂನು ನೊರೆಯಿಂದ ತುಂಬಿದ. ಅವರಿಗೆ ಅರಿವಾಗದಂತೆಯೇ ಕತ್ತಿಯಾಡಿಸಿದ. ಧರ್ಮಸಾಗರರ ಮನಸ್ಸು ಮೆಚ್ಚುವಂತೆ ಮಾಡಿದ.

ಉಗುರು ಕತ್ತರಿಸುತ್ತಿದ್ದಾಗ ಧರ್ಮಸಾಗರರು ಅಂದರು—"ಓಲಗ ಬಾರಿ ಸುಕ್ಕೆ ನೀನೇಕೆ ಒಪ್ಪಿಕೊಳ್ಳುತ್ತೀ—ಈ ಕ್ಷೌರದ ಕೆಲಸದಲ್ಲೇ ಜೀವನ ನಡೆ ಯುಲ್ಲವೇ" ಎಂತ.

"ಎಲ್ಲಿ ಜೀವನ ನಡೆಯುತ್ತೆ ಪ್ರಭೋ! ಈಗೆಲ್ಲರೂ ಈ ಸೆಲೂನ್‌ಗೆ ಹೋಗಿ ಮಾಡಿಸಿಕೊಂಡು ಬಿಡುತ್ತಾರಯೇ ವಿನಹಾ ನನ್ನ ಹಾಗೆ ರಸ್ತೆ ತುದೀಲಿ ನಿಂತವನನ್ನು ಕಣ್ಣೆತ್ತಿ ಕೂಡ ನೋಡುವುದಿಲ್ಲ. ಹೊಟ್ಟೆಹೊರೆಯೋದೇ ಕಷ್ಟ".

"ನಯನಜ ನೀನು ನಿನ್ನೂ ಕಣ್ಣೆತ್ತಿ ನೋಡುವುದಿಲ್ಲವೇ" ಎಂದರು ಧರ್ಮಸಾಗರರು ನಗುತ್ತಾ. ಅವರ ಹಾಸ್ಯಕ್ಕೆ ಅವರೇ ಮನಸೋತಿದ್ದರು.

"ಸೆಲೂರ್ ಇಟ್ಟರೆ ಕಣ್ಣೆತ್ತಿ ನೋಡುತ್ತಾರೆ" ಎಂದ ಕ್ಷೌರದವ.

"ಹಾಗಾದರೆ ಏಕೆ ಇಡುಲ್ಲ"

"ಹಣ ಎಲ್ಲಿಬಂತು ಪ್ರಭೋ, ಕಡೇ ಪಕ್ಷ ಐನೂರು ರೂಪಾಯಿಗಳಾದರೂ ಬೇಕು. ಕನ್ನಡಿ, ಕುರ್ಚಿ, ಕತ್ತಿ, ಕಾರ್ಪೆಟ್ಟು—ಮಗ್ಗಲು ಹಾಸಿಗೆ, ಸೆಂಟು, ಗಂಧದ ಸಾಬೂನು ಇತ್ಯಾದಿ ಕಡಿಮೆ ಖರ್ಚೇ!" ಎಂದ.

ಧರ್ಮಸಾಗರರ ಮನಸ್ಸು ಆಹ್ಲಾದಕರವಾಗಿತ್ತು.

"ನಾನು ಕೊಡುತ್ತೇನೆ ಸಾಲ. ನೀನಿಡು" ಎಂದೇಬಿಟ್ಟರು.

ಕ್ಷೌರದವ ಬೆದರಿದ. ಯಾವ ಆಧಾರದ ಮೇಲೆ ಇವರು ಸಾಲ ಕೊಡ್ತಾರೆ. ಇದಕ್ಕೆ ಇದ್ದ ಗುಡಿಸಲನ್ನ ಅಡಹಾಕು ಎನ್ನುತ್ತಾರೋ ಏನೋ ಎಂದು.

'ಪ್ರಭೋ! ಬಡವನಿಗೆ ಅಷ್ಟು ಸಾಲ ಯಾವ ಆಧಾರದ ಮೇಲೆ ಕೊಟ್ಟೀರಿ! ಇಲ್ಲಿನ ತನಕ ಸಾಲ ಮಾಡಿಲ್ಲ. ಇದ್ದುದರಲ್ಲೇ ಜೀವನ ನಡೆಸುತ್ತಿದ್ದೀನಿ. ಈಗೇಕೆ ಸಾಲ ಮಾಡಲಿ. ಮುಂದೆ ಏನೋ ಗತಿ" ಎಂದ.

ಧರ್ಮಸಾಗರರಿಗೆ ಇನ್ನೂ ಖುಷಿ ಇಳಿದಿತ್ತಿಲ್ಲ.

"ನಿನಗೆ ಹಣ ಸಾಲ ಕೊಡುಕ್ಕೆ ಆಧಾರ ಏನು ಬೇಕೋ—ನಾನೇ ಸೆಲೂರ್ ಇಡ್ತೀನಿ. ನೀನು ಕೆಲಸ ಮಾಡಿಕೊಂಡಿರು. ದಿನಾಗಲೂ ಬಂದ ಹಣ ನನಗೆ ಕೊಡು. ತಿಂಗಳಿಗೆ ಇಷ್ಟು ಅಂತ ಸಂಬಳ ಕೊಡುತ್ತೇನೆ. ನನಗೆ ಮಾತ್ರ ಮನೇಗೆ ಬಂದು ಕ್ಷೌರ ಮಾಡಬೇಕು" ಎಂದರು.

ಕ್ಷೌರದವ ತನ್ನ ಅದೃಷ್ಟವನ್ನು ತಾನೇ ನಂಬಲಾರ. ಆದರೂ ಮನಸ್ಸಿನಲ್ಲಿ ಒಂದು ಕೊಂಕು. ಎಷ್ಟು ಸಂಬಳ ಕೊಡುತ್ತಾರೋ ಎಂದು. ಅದನ್ನೂ ಹೇಗಾದರೂ ವಿಶದೀಪಡಿಸಿದರೆ ಒಳ್ಳೆಯದು ಎಂದು ಯೋಚಿಸಿದ.

ಮೆಲ್ಲಗೆ ಹೇಳಿದ. "ಪ್ರಭೋ! ಮನೇ ಜೀವನಕ್ಕೆ ಏನಿಲ್ಲಾ ಅಂದರೂ ನಲವತ್ತು ರೂಪಾಯಿ ಆಗುತ್ತೆ. ಓಲಗ ಬಾರಿಸೋದು ಬಿಟ್ಟರೆ ನನ್ನ ಗತಿ ಹೇಗೆ" ಎಂದೆ.

"ನಾನೇ ನಲವತ್ತು ಸಂಬಳ ಕೋಡ್ತೀನೋ" ನಾಳೆ ಬಾ ಹಣ ಕೊಡ್ತೇನೆ ನೀನೆ ಎಲ್ಲಾ ಕೊಂಡುಕೊಂಡು ಶುರು ಮಾಡು ಎಂದರು ಧರ್ಮಸಾಗರರು.

* * *

ಹದಿನೈದು ದಿವಸಗಳಾಗುವುದರೊಳಗೇ ಸೆಲೂನ್ ಶುರುವಾಯಿತು. ಇಟ್ಟ ಘಳಿಗೆ ಚಿನ್ನ. ಮೊದಲನೇ ದಿನ ಧರ್ಮಸಾಗರರ ಲೆಕ್ಕಕ್ಕೆ ನಾಲ್ಕು ರೂಪಾಯಿ ಜಮಾ ಕಟ್ಟಿದ. ತಿಂಗಳಾಗುತ್ತಲೂ ಸಂಬಳಕ್ಕೆ ಬಂದಾಗ ಧರ್ಮ ಸಾಗರರು ಲೆಕ್ಕ ನೋಡಿದರು. ಸಂತೋಷವಾಗಿ ನಲವತ್ತು ರೂಪಾಯಿ ಸಂಬಳ ಕೊಟ್ಟರು. ನಿನ್ನ ಸಹಾಯಕ್ಕೆ ಇನ್ನೊಬ್ಬನನ್ನು ಬೇಕಾದರೆ ಗೊತ್ತುಮಾಡಿಕೊ ಅವನಿಗೆ ಮೂವತ್ತು ಸಂಬಳ ಕೊಡೋಣ ಎಂದರು.

ಇನ್ನೊಬ್ಬನನ್ನು ನೇಮಿಸಿದರು. ಒಂದು ತಿಂಗಳಾದ ಮೇಲೆ ಅವ ಹೇಳಿದ. ಪ್ರಭೋ, ಒಂದೇ ಕಡೆ ಇಬ್ಬರು ಕೆಲಸ ಮಾಡುವ ಬದಲು ರಸ್ತೆ ಈ ತುದಿಯಲ್ಲಿ ಒಬ್ಬ, ಆ ತುದಿಯಲ್ಲಿ ಒಬ್ಬ ಹೀಗೆ ಎರಡು ಸೆಲೂನ್ ಇಟ್ಟರೆ ಹೆಚ್ಚು ಸಂಪಾದನೆ ಆಗುತ್ತೆ ಎಂದು. ರುಚಿ ಕಂಡ ಧರ್ಮಸಾಗರರು ಅವನಿಗೆ ಐನೂರು ಕೊಟ್ಟು ಒಂದು ಸೆಲೂನ್ ಇಡಿಸಿದರು.


ಬೀದಿಗೊಂದು, ಕೇರಿಗೊಂದು, ಹೀಗೆ ಕೊನೆಗೆ ಊರಿನಲ್ಲಿ ಹದಿನಾರು ಸೆಲೂನ್‌ಗಳಾದುವು. ಊರಿನ ಕ್ಷೌರಿಕರೆಲ್ಲಾ ಧರ್ಮಸಾಗರರ ಸಂಬಳದ ಆಳು ಗಳೇ ಆದರು. ಆಗಲೇ ಕ್ಷೌರಕ್ಕೆ ನಾಲ್ಕಾಣೆ ಎಂದು ಕ್ಷೌರದ ದರವನ್ನು ಏರಿಸಿದ್ದು. ಕ್ರಾಪ್ ಕತ್ತರಿಸುವುದಕ್ಕೆ ನಾಲ್ಕಾಣೆಯಿಂದ ಎಂಟಾಣೆಗೆ ಆಗಲೇ ಏರಿಸಿದ್ದು.

ಧರ್ಮಸಾಗರರಿಗೆ ಈಗ ಸೆಲೂನ್‌ಗಳಿಂದ ತಿಂಗಳಿಗೆ ಎರಡು ಸಾವಿರ ಸಂಪಾದನೆ ಎಂದು ಅವರ ನೌಕರ ಗೋಪ್ಯ ಲೆಕ್ಕದ ಪುಸ್ತಕದಿಂದ ವರದಿ ಮಾಡಿದ.

ಅದಕ್ಕೇ ಧರ್ಮಸಾಗರರು ಹೇಳಿದ್ದು.

"ಯಾರಿಗಾದರೂ ಒಂದು ಉಪಕಾರ ಮಾಡಹೋದರೇ ಸಾಕು. ಲಕ್ಷ್ಮಿ ಒದ್ದುಕೊಂಡು ಮನೆಗೆ ಬರುತ್ತಾಳೆ" ಅಂತ.

—ಕುಮಾರ.



ರಷ್ಯಾ ರಾಯಭಾರಿ—ಇದೆಲ್ಲಾ ಮಿಥ್ಯ, ಆತ್ಮವೇ ಸತ್ಯ.



ಪಸಂದ್ ಗೆಣಸು— ದಿವಾನರ ಬಂಗಲೇಲಿ ಬೆಳೆದಿದ್ದು.

ರೂಪಾಯಿಗೆ ಮೂರು— ತೊಗೊಳ್ಳೀ ದೇವ್ರು—

ರೂಪಾಯಿ ಇಳಿತಾಯ

ಒಳ್ಳೇ ಕ್ರಿಷ್ಣಪ್ಪಾ! ತನ್ನ ದೇಶಾನ ಉದ್ಧಾರ ಮಾಡುಕ್ಕೆ ಹೋಗಿ, ಪಲ್ಟಿ ಹೊಡೆದು, ಇಲ್ಲಾ ಅಂದು, ಕಡೆಗೆ ಧೂಮಕೇತು ಬಡದಹಾಗೆ ಪೌಂಡು ಇಳೀತೂ ಅಂದ. ತೊಗೊ! ನಮ್ಮೋರೂ ಬೇರೆ ಮಾರ್ಗ ಕಾಣದೆ, ಜೋ ಹುಕುಂ ಅಲ್ಲದೆ ಇದ್ದರೂ ರೂಪಾಯೂ ಅದೇ ರೀತಿ, ಅಷ್ಟೇ ಮಟ್ಟಿಗೆ ಇಳಿತಾಯ ಅಂದರು. ಬ್ಯಾಂಕೆಲ್ಲಾ ಮೂರು ದಿನ ಮುಚ್ಚಿದರು. ಪೋಸ್ಟಾಫೀಸುಗಳನ್ನೂ ಮುಚ್ಚಿದರು. ಕಡೇಗೆ ಸರ್ಕಾರಿ ಖಜಾನೆಯನ್ನೂ ಮುಚ್ಚಿದರು.—ಹಾಗೇ ಯೋಚಿಸಿ, ಖಾಲಿ ಖಜಾನೆಯನ್ನು ಯಾಕೆ ಮುಚ್ಚಬೇಕಾಗಿತ್ತು. ಏನೋ ಕಾನೂನು ಸರಿಯಾಗಿರಲಿ ಅಂತ ಇರಬಹುದು ಅನ್ನಿ.

ಇದೇನೋ ದೊಡ್ಡ ದೊಡ್ಡವರ ಸಮಸ್ಯೆ. ಇದರ ಪೂರ್ಣ ಅರ್ಥ, ಇದರ ಆಗು ಹೋಗುಗಳು ನಮಗೇನೂ ಸದ್ಯಕ್ಕೆ ಸರಿಯಾಗಿ ತಿಳಿಯೋದಿಲ್ಲ. ಆದರೆ, ಹೀಗಾಯ್ತು ಅನ್ನುತ್ತಿದ್ದ ಹಾಗೆ ಜೀವನಾನೇ ಬಿಗಡಾಯಿಸಿಕೊಂಡು ಬಿಡ್ತಲ್ಲ! ಇದು ಯಾಕೆ? ಅಂತೀನಿ.

ಸೋಮವಾರ ಕೆಟ್ಟ ಸುದ್ದಿ, ಕಹಳೆ ಬಾಯಿಗೆ ಮುತ್ತುಕೊಟ್ಟ ಹಾಗೆ ಹರಡಿಕೊಂಡಿತು. ಆಗತಾನೇ ಆಯುಷ್ಕರ್ಮ ಶಾಲೆಗೆ ಕೂದಲು ಕತ್ತರಿಸಿ ಕೊಳ್ಳೋಣ ಅಂತ ಹೋಗ್ತಿದ್ದೆ. ಇನ್ನೂ ಕುರ್ಚಿ ಮೇಲೆ ಕೂತಿಲ್ಲ ಆಗಲೇ ಕ್ಷೌರಿಕ ಹೇಳಿದ. "ಸ್ವಾಮಿ—ಕ್ರಾಪ್ ಕಟ್ಟಿಗೆ ಇವತ್ತಿಂದ ಹನ್ನೆರಡಾಣೆ" ಅಂತ. ಯಾಕಯ್ಯಾ! ಎಂದೆ. ರೂಪಾಯಿ ಬೆಲೆ ಇಳಿದುಹೋಯ್ತು ಅಂದ. "ಅರೆ, ಅದು ಡಾಲರ್ ಪ್ರದೇಶಕ್ಕೆ ಮಾತ್ರ ಕಣಯ್ಯಾ. ನಮ್ಮೂರಿನಲ್ಲಿ ಏನು" ಎಂದೆ. "ಹಾಗುಂಟೆ ಸ್ವಾಮಿ. ಈ ಕತ್ತಿ, ಈ ಮಿಷನ್ನು, ಈ ಸಾಬೂನು, ಈ ಬುರಸ್ ಎಲ್ಲಾ ಡಾಲರ್ ಕೊಟ್ಟು ಕೊಳ್ಳೋದೆ—ಅದಕ್ಕೆ, ಮೂರನೇ ಒಂದು ಭಾಗದಷ್ಟು ಹೆಚ್ಚು ಮಾಡಬೇಕಾಯ್ತು. ಚಿಕ್ಕ ಚಿಲ್ಲರೆ ಚೆನ್ನಲ್ಲ ಅಂತ ಬಂದಾ ಹನ್ನೆರಡಾಣೆ. ನಮ್ಮ ಸಂಘದಲ್ಲಿ ಇದು ಸರ್ವಾನುಮತದಿಂದ ಪಾಸಾಯಿತು" ಅಂದ.

ತಲೆ ಕೆರೆದುಕೊಳ್ಳೋ ಅಷ್ಟು ಬೆಳೆದಿತ್ತು. ಅವನ ಕೈಗೆ ತಲೆ ಕೊಟ್ಟೆ. ಹನ್ನೆರಡಾಣೆ ಬೋಳು.

ಆ ಮೇಲೆ ಮನೆಗೆ ಹೋಗಿ ಸ್ನಾನ ಮಾಡಿದೆ. ಅಷ್ಟು ಹೊತ್ತಿಗೆ ನಾನು ಕೆಲಸಮಾಡುತ್ತಿದ್ದ ಬ್ಯಾಂಕಿಗೆ ರಜಾ ಎಂದು ಗೊತ್ತಾಯಿತು. ಊರಿನಲ್ಲಿ ಏನು ಸೋಜಿಗ ನಡೆಯುತ್ತಿದೆಯೋ ನೋಡೋಣ ಅಂತ ಮಾರುಕಟ್ಟೆಯ ಹತ್ತಿರ ಹೋದೆ.

ಬಾಗಿಲಲ್ಲೇ ತರಕಾರಿ ಮಾರುತ್ತಿದ್ದಳು ಒಬ್ಬ ಮುದುಕಿ. ಒಬ್ಬಾತ ಸೊಪ್ಪು ವ್ಯಾಪಾರ ಮಾಡುತ್ತಾ ಇದ್ದ. ಯಥಾ ಪ್ರಕಾರ ಜಗಳ. "ನಿನ್ನೆ ಆಣೆಗೆ ಮೂರು ಕಂತು ಸೊಪ್ಪು ಕೊಟ್ಟೆ. ಇವತ್ತು ಎರಡೇ ಅಂತ ಹೇಳ್ತಿ. ಅದೇನು" ಅಂತ. "ಅದೆಲ್ಲಾ ನನಗೆ ಗೊತ್ತಿಲ್ಲ. ಸಂತೇಲಿ ಈ ಬೆಲೆಗೆ ಮಾರ ಬೇಕು ಅಂತೆ ಹೇಳಿದ್ದಾರೆ. ಇವತ್ತು ಈ ಬೆಲೆ" ಅಂತ ಆಕೆ. ಈ ಯುದ್ಧ ಮುಗಿಯುವಂತೆಯೇ ಇತ್ತಿಲ್ಲ. ಆಗ ನಾನು ಹೋಗಿ ಆತನಿಗೆ ಹೇಳಿದೆ. "ಅಯ್ಯಾ! ಈ ಸೊಪ್ಪು ಬೆಳೆಯಬೇಕಾದರೆ, ನೆಲಕ್ಕೆ ಸೀಮೆ ಗೊಬ್ಬರ ಹಾಕ ಬೇಕು. ಸೀಮೆ ಗೊಬ್ಬರಕ್ಕೆ ನಾವು ಈಗ ಹೆಚ್ಚು ರೂಪಾಯಿ ಕೊಡಬೇಕು. ಅದಕ್ಕೋಸ್ಕರ ಈಗ ಸೊಪ್ಪಿನ ಬೆಲೆ ಹೆಚ್ಚಿದೆ" ಎಂದು ಹೇಳಿದೆ. ಕ್ಷೌರಿಕನ ಮಾತು ಜ್ಞಾಪಿಸಿಕೊಂಡು.

"ಇವರು ಹಾಕೋ ಗೊಬ್ಬರ ಗೊತ್ರೀ, ಏನೋ ಹೇಳುಕ್ಕೆ ಬರ್ತಾರೆ" ಅಂತ ನನ್ನ ಮೇಲೆ ರೇಗಿಕೊಂಡು ಬರೀ ಕೈಲಿ ಹೊರಟುಹೋದ.

ಮಾರುಕಟ್ಟೆಯ ಒಳಕ್ಕೆ ಹೋದೆ. ಕಸಪರಿಕೆ, ಹೂವು, ಹಣ್ಣು, ಗುಜರಿ ಸಾಮಾನುಗಳು, ಹಳೇ ಬಟ್ಟೆಗಳು ಎಲ್ಲದರ ಬೆಲೆಯೂ ಏರಿತ್ತು. ಇವೆಲ್ಲಕ್ಕೂ ಡಾಲರಿಗೂ ಸಂಬಂಧ ಹೇಗೆ ಎಂದು ಯೋಚಿಸುತ್ತಾ ಹೊರಗೆ ಬಂದೆ. ಸೀಮೆ ಗೊಬ್ಬರ ಒಂದು ಕಾರಣ, ಜೀವನದ ಮಟ್ಟ ಹೆಚ್ಚುವುದು, ಎರಡನೆಯ ಕಾರಣ, ಏನೇ ಆಗಲಿ, ನಮಗೆ ಹಣ ಹೆಚ್ಚು ಬರಲಿ, ಬೇಗ ಬರಲಿ, ಮೂರನೆಯ ಕಾರಣ. ಮತ್ತು ದೊಡ್ಡ ಕಾರಣ ಅನ್ನಿಸಿತು.

ಅಷ್ಟು ಹೊತ್ತಿಗೆ ಹನ್ನೊಂದು ಗಂಟೆ ಆಗಿತ್ತು. ಜಟ್ಕಾದಲ್ಲಿ ಮನೆಗೆ ಹೋಗೋಣ ಅಂತ ಜಟ್ಕಾ ನಿಲ್ದಾಣದ ಹತ್ತಿರ ಹೋದೆ. ಮಲ್ಲೇಶ್ವರಂ ಏಕದ್ಮಿ, ಚಾರ್ ಆಣಾ ಅಂತ ಕೂಗ್ತಿದ್ದ. ಹಿಂದಿನ ದಿವಸ ತೀನ್ ಆಣಾ— ವಹವ್ವಾ! ಕುದುರೆ ಜೀನು, ಹುರುಳಿ ಕೂಡ ಅಮೇರಿಕಾದಿಂದ ಬರುತ್ತೋ ಎಂದುಕೊಂಡೆ. ಕಾಲು ಪದ ಹೇಳ್ತಾ ಇತ್ತು. "ಚಾರ್ ಆಣಾ"ತೆತ್ತು ಮನೆಗೆ ಬಂದೆ.

ಊಟಕ್ಕೆ ಕುಳಿತೆ. ಸಾರು ಅನ್ನ ಕಲಸುತ್ತಿದ್ದಾಗ ಬಡಿಸಿದಾಕೆ ಮೆಲ್ಲಗೆ ಹೇಳಿದಳು. "ಏನೂ ಅಂದ್ರೆ, ಬ್ಯಾಂಕು ಎಲ್ಲಾ ಮುಚ್ಚಿಬಿಟ್ಟಿದ್ದಾರಂತೆ,

ಅಂದರೆ ಸರ್ಕಾರ ಭದ್ರವಿಲ್ಲವೇ? ನೀವು ಇನ್ನೆಲ್ಲಾದರೂ ಕೆಲಸ ನೋಡಿಕೋ ಬೇಕಾಗುತ್ತ್ಯೇ" ಅಂತ. ಇದು ನನಗೆ ಹೊಸದು. ಈ ದೃಷ್ಟಿಕೋನ ತೋಚೇ ಇರಲಿಲ್ಲ ನನಗೆ. ಇದನ್ನು ಚೆನ್ನಾಗಿ ತಿಳಿದುಕೊಳ್ಳೋಣ ಅಂತ. "ಇದು ಯಾರೇ ಹೇಳಿದ್ದರು ನಿನಗೆ ಇಷ್ಟು ಬೇಗ" ಅಂದೆ. "ಪಕ್ಕದ ಮನೆ ಸಾತಕ್ಕ ಹೇಳಿದರೂ ಅಂದ್ರೆ, ಸರಕಾರಕ್ಕೆ ರೂಪಾಯೇ ಇಲ್ಲವಂತೆ. ಇದ್ದದ್ದೆಲ್ಲಾ ದುಂದು ಮಾಡಿಬಿಟ್ಟಿದ್ದಾರಂತೆ. ಅದಕ್ಕೇ ಈಗ ರೂಪಾಯಿ ಬೆಲೆ ತುಂಬಾ ಇಳಿದು ಹೋಗಿದೆಯಂತೆ. ರೂಪಾಯೇ ಹೀಗಾದರೆ ಅದನ್ನೇ ವಹಿವಾಟುಮಾಡುವ ಬ್ಯಾಂಕುಗಳೆಲ್ಲಾ ಮುಚ್ಚಲೇ ಬೇಕಾಗುತ್ತಂತೆ. ಆಂದರೆ, ನಿಮ್ಮ ಕೆಲಸ ಕೂಡ ಖೋತಾ, ಈಗಿನ ಕಾಲದಲ್ಲಿ ಹೆಗಲ ಮೇಲೆ ಮೂರೆಳೆ ಬಿದ್ದೋರಿಗೆ ಬೇರೆ ಎಲ್ಲಿ ಚಾಕರಿ ಸಿಗುತ್ತೇ ಅಂದ್ರೆ" ಅಂತ ಪುಣ್ಯಾತಿಗಿತ್ತಿ ಅಳುಕ್ಕೇ ಶುರು ಮಾಡಿಬಿಟ್ಟಳು.

"ಅಯ್ಯೋ ಪೆಚ್ಚೆ, ಸುಮ್ಮನೆ ಹಾಗೆ ಕೇಳಿದೆ. ಅದು ದಿಟವಲ್ಲ. ಮೂರೇ ದಿನ ಬ್ಯಾಂಕು ಮುಚ್ಚಿರೋದು. ಆ ಮೇಲೆ ತೆಗೆದೇ ತೆಗೆಯುತ್ತಾರೆ. ನನ್ನ ಕೆಲಸ ಏನೂ ಹೋಗುಲ್ಲ. ಇದಕ್ಕೇ ಅಳೋದೆ, ಸರಿಯಾಯ್ತು" ಎಂದು ಸಮಾಧಾನ ಹೇಳಿ, ಆ ಮೇಲೆ ಊಟ ಮುಂದುವರೆಸಿದೆ.

ಊಟಮಾಡಿ ಆರಾಮವಾಗಿ ಮಲಗಿದೆ. ಮಧ್ಯಾಹ್ನ ಮೂರು ಮೂರುವರೆ ಗಂಟೆ ಹೊತ್ತಿಗೆ ನಜರ್ ರಾಮರಾಯ ಬಂದ. "ಏನು ಮಾಡೋದು ಅಂತ ಗೊತ್ತಾಗದೇ ಬಂದೆ. ಹಾಗೇ ಹರಟೆ ಕೊಚ್ಚೋಣ ಅಂತ" ಎಂದು ಶುರು ಮಾಡಿದ.

ಇನ್ನೇನು ಮಾತು. ಗೊತ್ತೇ ಇದೆಯಲ್ಲ. ಕ್ರಿಪ್ಸು ಮಾಥ್ಯೂಸ್ ಕೂಡ ಯೋಚನೆ ಮಾಡದೆ ಇದ್ದ ವಿವರಗಳನ್ನೆಲ್ಲಾ ಯೋಚಿಸತೊಡಗಿದೆವು.

ಸ್ಟಾಲಿನ್ನನಿಗೆ ಇದರಿಂದ ಬಲು ಖುಷಿ ಅಲ್ಲವೇ ಅಂದ.

"ಯಾಕೆ" ಎಂದೆ.

"ನೋಡು, ಡಾಲರ್ ಬೆಲೆ ಹೆಚ್ಚಾದರೆ, ನಾವುಗಳೆಲ್ಲಾ ಅಮೇರಿಕಾದಿಂದ ಹೆಚ್ಚು ಸಾಮಾನು ತೊಗೊಳ್ಳುಕ್ಕೆ ಆಗುಲ್ಲ, ಅಂದ ಮೇಲೆ, ರಷ್ಯನ್ ಸಾಮಾನು ನಾವು ತೆಗೆದುಕೊಳ್ಳಬೇಕಾಗುತ್ತೆ. ಅವರಿಗೆ ಅನುಕೂಲ ಅಲ್ಲವೇ."

"ಅವರಿಗಿದ್ದರೆ ತಾನೇನೋ ನಮಗೆ ಮಾರೋದು. ಹೊಟ್ಟೆಗಿಲ್ಲದ ದೇವರು ಪೂಜಾರೀಗೆ ವರ ಕೊಟ್ಟಹಾಗೆ."

"ಹೌದು ಹೌದು ಆದರೆ ಅವರೇ ಅಮೇರಿಕಾದಿಂದ ಕೊಂಡುಕೊಳ್ಳಬಹುದಲ್ಲಾ. ಅವರ ಭಾಗಕ್ಕೆ ಡಾಲರ್ ಇದ್ದಹಾಗೇ ಇದೆಯಲ್ಲ."

"ಅಯ್ಯೊ! ಅದೆಲ್ಲಾ ಗೊತ್ತೊ. ಅವರೇನೋ ಕೊಂಡುಕೊಳ್ಳುಕ್ಕೆ ಸಿದ್ಧರಾಗಿರಬಹುದು. ಆದರೆ, ಅವರೇನು ಕೊಟ್ಟರೂ ಇವರು ಮಾರಬೇಕಲ್ಲ!

"ದಿಟ! ಆದರೆ, ಚೀಣಾ ಹೆಸರಿನಲ್ಲಿ ಆ ದೇಶ ಈ ದೇಶದ ಹೆಸರಿನಲ್ಲಿ ತಾವು ತರಿಸಿಕೋ ಬಹುದಲ್ಲ."

"ಹೌದು ಅದೇನೋ ಸಾಧ್ಯ. ಸ್ವಲ್ಪ ದಿವಸಗಳ ಮಟ್ಟಿಗಾದರೂ?"

"ಸ್ಟಾಲಿನ್ ಹಾಗಿರಲಪ್ಪ. ಜಪಾನ್ ಈಗ ಉದ್ಧಾರ ಆಗಬಹುದಲ್ಲ."

"ಹೌದು. ಆದರೆ, ಜಪಾನೇನು? ಅಮೇರಿಕಾ ಏನು ಈಗ, ಎರಡೂ ಒಂದೇ ಅಲ್ಲವೇ?"

"ಮರೆತೇ ಇದ್ದೆ ಕಣೋ, ಹೌದು! ಹಾಗಾದರೆ ಇದರಿಂದ ಯಾರಿಗೆ ಪ್ರಯೋಜನ ಅಂತೀ?

"ಇದರಿಂದ ಅಮೇರಿಕನ್ನರಿಗೆ ಪ್ರಯೋಜನವಿಲ್ಲ. ಏಕೆಂದರೆ, ಹೆಚ್ಚು ಬೆಲೆ ಆದ್ದರಿಂದ ಹೆಚ್ಚಾಗಿ ಮಾರೋ ಹಾಗಿಲ್ಲ ಅವರು. ಇನ್ನ್ಯಾರೂ ಮಾರೋ ಹಾಗಿಲ್ಲ. ಏಕೆಂದರೆ, ಅವರಿಗೇ ಇಲ್ಲ. ನಮಗೆ ಬೇಕಾದ್ದು ಕೊಳ್ಳೋಹಾಗಿಲ್ಲ. ಡಾಲರಿಲ್ಲ—ಅಂದ ಮೇಲೆ ನೋಡು, ಇದರಿಂದ ಒಂದೇ ಪ್ರಯೋಜನ. ನಮ್ಮೂರಿನ ವ್ಯಾಪಾರಸ್ಥರಿಗೆ ಈಗ ಮೋಪು ನೋಡು, ಕಾರಣವೂ ಇಲ್ಲವೊ— ತಮ್ಮ ಹತ್ತಿರ ಇದ್ದ ವಸ್ತುವಿಗೇ ಬೆಲೆ ಏರಿಸಿ ನಫೆ ಗಿಟ್ಟಿಸಬಹುದು.

"ಇವರೆಲ್ಲಾ ಕ್ರಿಪ್ಸಿಗೆ ಒಂದು ಹಣತೆ ಹಚ್ಚಬೇಕು ಅಲ್ಲವೇ"

"ಇದೇಕೋ ಸರಿಯಾಗಿ ಕಾಣಿಸಿತು ನನಗೆ."

ನೀವೇನಂತೀರಿ?

—ಚಿ.ವಾ.

—o—

VITOFERRIN



TRADE MARK

ಶ್ರೇಷ್ಠತೆಯ ಹೆಗ್ಗುರುತು

ವೈಟೋಫೆರಿನ್

(ಆಧುನಿಕ ಶಕ್ತಿವರ್ಧಕ ಟಾನಿಕ್)

ಇದರಲ್ಲಿ "ಎ", "ಬಿ" ಮತ್ತು "ಡಿ" ಎಂಬ ವೈಟಮಿನ್ನುಗಳೂ, ಐರನ್, ಕ್ಯಾಲ್ಸಿಯಂ ಮುಂತಾದ ಲೋಹ ವಿಶೇಷಗಳೂ, ಶುದ್ಧಗೊಳಿಸಿದ ತಾಮ್ರವೂ, ಮತ್ತು ಮಾಲ್ಟ್‌ಸಾರ, ಜೇನುತುಪ್ಪಗಳನ್ನು ಸೇರಿಸಿ ತಯಾರಿಸಿದ ಒಂದು ಅಮೃತ ಪಾನ. ಇದರಲ್ಲಿ ದೇಹಶಕ್ತಿಗೆ ಬೇಕಾದ ಸಕಲ ಔಷಧಗಳ ಸಮೂಹವೂ ಇದೆ. ಖಾಯಿಲೆಯಿಂದ ಎದ್ದವರಿಗೂ, ಬಸುರಿ ಬಾಣಂತಿಯರ ದೇಹ ದಾರ್ಢ್ಯಕ್ಕೂ ಇದು ಅತ್ಯುತ್ತಮವಾದ ಔಷಧ. ಸೇವಿಸಲೂ ಬಹಳ ರುಚಿಯಾಗಿಯೂ ಮತ್ತು ಮಧುರವಾಗಿಯೂ ಇದೆ.

★ ★

ತಯಾರಕರು :

ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೋರಟರಿ, ಲಿಮಿಟೆಡ್

ಮಲ್ಲೇಶ್ವರಂ : : ಬೆಂಗಳೂರು 3.

೩೦-೯-೧೯೪೯ ರಿಂದ

ವಿಜಯಪ್ರದವಾದ ನಾಲ್ಕನೆ ವಾರ

ಬೆಂಗಳೂರು :—ನೂವಿಲ್ಯಾಂಡ್ ಮತ್ತು ಮಿನರ್ವಾ

ಮೈಸೂರು :—ರಾಜಕಮಲ್

ದಾವಣಗೆರೆ :—ಮೋತಿ; ಚಿತ್ರದುರ್ಗ :—ರೂಪವಾಣಿ

ಹಾಸನ :—ಪಿಕ್ಚರ್ ಪ್ಯಾಲೇಸ್; ಅರಸೀಕೆರೆ :—ವಿನೋದ

ಚಿಕ್ಕಮಗಳೂರು :—ಜ್ಯೋತಿ ಸೆಂಟ್ರಲ್.

ಮಹಾತ್ಮಾರವರ ಜನಪ್ರಿಯ ಕನ್ನಡ ಜಾನಪದ ಕಥಾಚಿತ್ರ

ನಾಗಕನ್ನಿಕಾ

ಪ್ರಧಾನ ಭೂಮಿಕೆಯಲ್ಲಿ :—ಜಯಶ್ರೀ, ರಾಘವೇಂದ್ರರಾವ್, ರತ್ನಮಾಲಾ, ವೀರಭದ್ರಪ್ಪ, ಪ್ರತಿಮಾದೇವಿ, ಜಿ. ಆರ್. ಸ್ಯಾಂಡೊ, ಮಹಾಬಲರಾವ್, ರಾಧಾಬಾಯಿ.

ನಿರ್ದೇಶನ :—ಜಿ. ವಿಶ್ವನಾಥ್. ಪ್ರೊಡ್ಯೂಸರ್ :—ಡಿ. ಶಂಕರಸಿಂಗ್.

★

DISTRIBUTORS FOR

Mysore State, Coorg, South Canara & Ceded Districts

SHANTA PICTURES,

Avenue Road : : Bangalore 2.

All rights Owned by :

N. V. GOPAL SETTY,

Jewellers' Chowk, Avenue Road, Bangalore 2.



Printed by B. S Iyengar, Bangalore City.
Publisher—B. N. Gupta. Editor—M. Shivaram